ಲೋಕಹಿತಂ ಮಮ ಕರಣೀಯಂ

# ಸೇವಾ ದಿಶಾ

ಹಿಂದು ಸೇವಾ ಪ್ರತಿಷ್ಠಾನದ ವಾರ್ತಾಪತ್ರಿಕೆ

ಸಂಪುಟ : 5    ಸಂಚಿಕೆ : 2    ನವೆಂಬರ್ -2009    ಪುಟಗಳು : 8    ಬೆಲೆ : 5-00

## ಹಿಂದು ಮೌಲ್ಯಗಳ ಉಳಿವು ಜಗತ್ತಿನ ಒಳಿತಿಗೆ ಅಗತ್ಯ - ಶ್ರೀ ಮುಕುಂದ

### ಮಹಿಳಾ ಸೇವಾವ್ರತಿ ತರಬೇತಿ ಶಿಬಿರದ ಸಮಾರೋಪ

**ಬೆಂಗಳೂರು :** ಬಾಹ್ಯ ಆಕ್ರಮಣ, ಆಂತರಿಕ ಸಮಸ್ಯೆಗಳು ಹಾಗೂ ಜಗತ್ತಿನೆಲ್ಲೆಡೆ ಆದ ಬದಲಾವಣೆಗಳ ಪರಿಣಾಮದಿಂದಾಗಿ ಭಾರತೀಯ ಸಮಾಜ ರೋಗಪೀಡಿತಗೊಂಡು ಪತನದತ್ತ ಮುಖಮಾಡಿತ್ತು. ಅದನ್ನು ಸರಿಪಡಿಸುವ, ರೋಗ ನಿವಾರಣೆ ಮಾಡುವ ನಿಟ್ಟಿನಲ್ಲಿ ಹಿಂದು ಸೇವಾ ಪ್ರತಿಷ್ಠಾನ ಕೆಲಸ ಮಾಡುತ್ತಿದೆ. ಸಾವಿರಾರು ವರ್ಷಗಳಿಂದ ಪರಂಪರೆಗೆ ನೆಲೆಯಾಗಿರುವ ಈ ಸಮಾಜವನ್ನು ಸರ್ವಾಂಗಸುಂದರಗೊಳಿಸುವುದೇ ಹಿಂದು ಸೇವಾ ಪ್ರತಿಷ್ಠಾನದ ಉದ್ದೇಶ – ಎಂದು ರಾ.ಸ್ವ.ಸಂಘದ ದಕ್ಷಿಣ ಪ್ರಾಂತ ಪ್ರಚಾರಕರಾದ ಶ್ರೀ ಮುಕುಂದ ಅವರು ನುಡಿದರು. ಯಲಹಂಕದಲ್ಲಿ ಪ್ರತಿಷ್ಠಾನವು ಆಯೋಜಿಸಿದ್ದ 31ನೇ ತಂಡದ ಮಹಿಳಾ ಸೇವಾವ್ರತಿ ತರಬೇತಿ ಶಿಬಿರದ ಸಮಾರೋಪ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಅವರು ಮಾತನಾಡುತ್ತಿದ್ದರು.




ವೇದಿಕೆಯಲ್ಲಿ ಎ-ಬ : ಶ್ರೀ ಮುಕುಂದ, ಶ್ರೀ ಹೆಚ್.ಎಸ್. ಶೆಟ್ಟಿ, ಶ್ರೀ ಪ್ರದೀಪ್ ಕುಲಕರ್ಣಿ, ಶ್ರೀ ಶ್ರೀಧರ್ ಸಾಗರ್

ಕೇವಲ ಸರಕಾರಗಳ ಬದಲಾವಣೆಯಿಂದ ಸಾಮಾಜಿಕ ಬದಲಾವಣೆ ಸಾಧ್ಯವಿಲ್ಲ. ಸೇವೆಯ ಮೂಲಕ ವ್ಯಕ್ತಿಗತ ಬದಲಾವಣೆ ಹಾಗೂ ಜೀವನಶೈಲಿ ಮತ್ತು ದೃಷ್ಟಿಕೋನಗಳ ಬದಲಾವಣೆಯಿಂದ ಮಾತ್ರ ಸಮಾಜದಲ್ಲಿ ಬದಲಾವಣೆ ತರಬಹುದು ಎಂದು ಅಭಿಪ್ರಾಯಪಟ್ಟ ಅವರು, ಜಗತ್ತಿನ ಇಂದಿನ ಎಲ್ಲ ಸಮಸ್ಯೆಗಳಿಗೆ ಹಿಂದು ಮೌಲ್ಯಗಳಲ್ಲಿ ಪರಿಹಾರವಿದೆ. ಹಾಗಾಗಿ ಹಿಂದು ಮೌಲ್ಯಗಳ ಉಳಿವು ಜಗತ್ತಿಗೆ ಅಗತ್ಯ. ಈ ನಿಟ್ಟಿನಲ್ಲಿ ನಾವು ಕೆಲಸ ಮಾಡಬೇಕಾಗಿದೆ ಎಂದರು.



ತರಬೇತಿಯಲ್ಲಿ ಪಾಲ್ಗೊಂಡಿದ್ದ ಯುವತಿಯರು

ಭಾರತ ದೇಶದ ಮಹತ್ವ ಭಾರತದಲ್ಲಿ ಇದ್ದರೆ ನಮಗೆ ತಿಳಿಯುವುದಿಲ್ಲ. ಭಾರತವನ್ನು ಬಿಟ್ಟು ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ಸಂಚರಿಸಿದಾಗ ನಮ್ಮ ದೇಶದ ಮಹತ್ವ ಚೆನ್ನಾಗಿ ಅರಿವಾಗುತ್ತದೆ ಎಂದು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪ್ರಸಿದ್ಧ ವಿನ್ಯಾಸ ಸಂಸ್ಥೆಯ ನಿರ್ವಾಹಕ ನಿರ್ದೇಶಕರಾದ ಶ್ರೀ ಪ್ರದೀಪ್ ಕುಲಕರ್ಣಿ ನುಡಿದರು.

ನಾಸ್ತಿಕನಾದ ಅನ್ಯಮತೀಯನಾದ ನನ್ನ ಗೆಳೆಯನೊಬ್ಬ ಸಂದರ್ಭ ಬಂದಾಗ ಮತಾಂಧನಾಗಿ ವರ್ತಿಸಿದ ಆಸ್ತಿಕನಾದ ಇನ್ನೊಬ್ಬ

2ನೇ ಪುಟಕ್ಕೆ

# ನೀವು ಬರೆದಂತೆ....

ಗಾನಕೋಗಿಲೆ ದಿ. ಎಂ.ಎಸ್. ಸುಬ್ಬುಲಕ್ಷ್ಮಿಯವರ ಬಗ್ಗೆ ಸೇವಾದಿಶಾದ ನಿರ್ದೇಶಕರ ನುಡಿ ಅಂಕಣದಲ್ಲಿ (ಆಗಸ್ಟ್ ಸಂಚಿಕೆ) ಓದಿದಾಗ ಅವರ ನೆನಪು ಮರುಕಳಿಸಿತು. ಸುಬ್ಬುಲಕ್ಷ್ಮಿಯವರಿಗೆ ಸಂಗೀತದಲ್ಲಿದ್ದ ಶ್ರದ್ಧೆ, ಕೇಳುಗರ ಬಗ್ಗೆ ಇದ್ದ ಗೌರವ ಅನುಕರಣೀಯ. ಯಾವಾಗಲೂ ಅವರ ಕಛೇರಿಗೆ ಹೋಗುತ್ತಿದ್ದ ನಮ್ಮ ತಾತ ನ್ಯಾಯಮೂರ್ತಿ ಶ್ರೀ ಕೆ.ಎಸ್. ಚಂದ್ರಶೇಖರ್ ಅಯ್ಯರ್ ಅವರು ಅನಾರೋಗ್ಯದ ಕಾರಣದಿಂದ ಸಂಗೀತ ಕೇಳಲು ಕಛೇರಿಗಳಿಗೆ ಹೋಗುವುದನ್ನು ನಿಲ್ಲಿಸಿಬಿಟ್ಟರು. ಇದನ್ನು ಗಮನಿಸಿದ ಸುಬ್ಬುಲಕ್ಷ್ಮಿಯವರು ನಮ್ಮ ಮನೆಗೇ ಬಂದು ನಮ್ಮ ತಾತನ ಆರೋಗ್ಯ ವಿಚಾರಿಸಿ, ತಾತನ ಅಪೇಕ್ಷೆಯಂತೆ ತೋಡಿ ರಾಗ ತ್ಯಾಗರಾಜರ ಕೀರ್ತನೆ ಹಾಡಿದರು. ಅಂತಹ ಮಿಡಿಯುವ ಹೃದಯ ಅವರದ್ದು!

– **ಶ್ರೀಮತಿ ಸೀತಾ ಶಿವರಾಮ್**, ಬೆಂಗಳೂರು.

1ನೇ ಪುಟದಿಂದ

## ಹಿಂದು ಮೌಲ್ಯಗಳ ......

ಗೆಳೆಯ ನನ್ನನ್ನೇ ಮತಾಂತರಿಸಲು ಪ್ರಯತ್ನಿಸಿದ. ಈ ಘಟನೆಯಿಂದ ನಾನೊಬ್ಬ ನಾಸ್ತಿಕನಾದ ಹಿಂದುವಾದರೂ ಹಿಂದು ಧರ್ಮದ ಶ್ರೇಷ್ಠತೆ ಅರಿವಾಗಲು ಸಾಧ್ಯವಾಯಿತು. ಈಗ ಆಸ್ತಿಕ ಹಿಂದುವಾಗಿದ್ದೇನೆ. ಪ್ರತಿಷ್ಠಾನ ನಡೆಸುತ್ತಿರುವ ಸಾಮಾಜಿಕ ಸೇವಾಕಾರ್ಯಗಳನ್ನು ಕಂಡು ನನಗೆ ಬಹಳ ಸಂತಸವಾಗಿದೆ. ನಾನು ನಿಮ್ಮೊಂದಿಗೆ ಇರುತ್ತೇನೆ ಎಂಬ ಭರವಸೆಯೊಂದಿಗೆ ಅಧ್ಯಕ್ಷಸ್ಥಾನ ವಹಿಸಿದ್ದ ಪ್ರಸಿದ್ಧ ಉದ್ಯಮಿ ಶ್ರೀ ಹೆಚ್.ಎಸ್. ಶ್ರೀನಿವಾಸ ಶೆಟ್ಟಿಯವರು ಹೇಳಿದರು.

ಅಕ್ಟೋಬರ್ 1ನೇ ತಾರೀಖಿನಿಂದ 40 ದಿನಗಳ ಕಾಲ ನಡೆದ ಈ ಶಿಬಿರದಲ್ಲಿ 21 ಜಿಲ್ಲೆ, 79 ಸ್ಥಾನಗಳಿಂದ ಆಗಮಿಸಿದ್ದ 112 ಯುವತಿಯರು ಸೇವಾವ್ರತಿಗಳಾಗಿ ಸಮಾಜಕಾರ್ಯಕ್ಕೆ ಪಾದಾರ್ಪಣೆ ಮಾಡಿದರು. 40 ದಿನಗಳ ಕಾಲ ಈ ಎಲ್ಲ ನೂತನ ಸೇವಾವ್ರತಿಗಳಿಗೆ ದೈಹಿಕ, ಬೌದ್ಧಿಕ ಹಾಗೂ ಕೌಶಲ್ಯವೃದ್ಧಿ ತರಬೇತಿಯನ್ನು ನೀಡಲಾಯಿತು. ಬೆಂಗಳೂರಿನ 25ಕ್ಕೂ ಹೆಚ್ಚು ವಿವಿಧ ಸೇವಾ ಪ್ರಕಲ್ಪಗಳನ್ನು ವೀಕ್ಷಿಸುವ ಅವಕಾಶ ಕಲ್ಪಿಸಲಾಗಿತ್ತು. ಸೇವಾವ್ರತಿಗಳು ಈ ಅವಧಿಯಲ್ಲಿ ಬೇರೆ ಬೇರೆ ತಂಡಗಳಲ್ಲಿ ಸಮೀಪದ 26 ಗ್ರಾಮಗಳಿಗೆ ತೆರಳಿ, ಅಲ್ಲಿಯೇ ಮೂರುದಿನ ನೆಲೆನಿಂತು, ಬಾಲಗೋಕುಲ, ಮಾತೃಮಂಡಳಿ, ಭಜನೆ, ಯುವಭಾರತಿ, ಕಿಶೋರಭಾರತಿ ಸೇರಿದಂತೆ ಅನೇಕ ಚಟುವಟಿಕೆಗಳನ್ನು ನಡೆಸಿ, ಪ್ರಾಯೋಗಿಕ ಶಿಕ್ಷಣ ಪಡೆದರು. 40 ದಿನಗಳ ಶಿಬಿರ ಅವರಲ್ಲಿ ಮೂಡಿಸಿದ ಆತ್ಮವಿಶ್ವಾಸ ಅವರ ಅನಿಸಿಕೆಗಳಲ್ಲಿ ವ್ಯಕ್ತವಾಯಿತು.

ಪ್ರಾರಂಭದಲ್ಲಿ, ಶಿಬಿರ ಸಂಚಾಲನಾ ಸಮಿತಿಯ ಕಾರ್ಯದರ್ಶಿ ಶ್ರೀಮತಿ ಆಶಾ ಎಲ್ಲರನ್ನೂ ಸ್ವಾಗತಿಸಿದರು. ಪ್ರತಿಷ್ಠಾನದ ಸಂಚಾಲಕರಾದ ಶ್ರೀಪಾದರು ಶಿಬಿರದ ಪೂರ್ಣಪ್ರಮಾಣದ ವರದಿ ನೀಡಿದರು. ಇನ್ನೋರ್ವ ಸಂಚಾಲಕರಾದ ಕೃಷ್ಣಮೂರ್ತಿಯವರು ವಂದನಾರ್ಪಣೆ ನಡೆಸಿಕೊಟ್ಟರು.

✱

**ಸಂಪಾದಕೀಯ ಸಹಕಾರ**

**ಶ್ರೀಮತಿ ಮೃದುಲಾ ವಿಜಯೇಂದ್ರ, ಶ್ರೀಮತಿ ವರಲಕ್ಷ್ಮೀ**
**ಭ। ಪ್ರತಿಭಾ, ಭ। ರಮಾ, ಶ್ರೀ ಗಂಗನಂದನ**

**ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಕರ್ತರ ಮೂಲಕ ದೇಶದ 73 ಸಾವಿರಕ್ಕೂ ಹೆಚ್ಚು ಸ್ಥಳಗಳಲ್ಲಿ 1.5 ಲಕ್ಷಕ್ಕೂ ಹೆಚ್ಚು ಸೇವಾಕಾರ್ಯಗಳು ನಡೆಯುತ್ತಿವೆ.**

## ಯೋಗಾಸನ



### ವೃಕ್ಷಾಸನ



1. ಸಮಸ್ಥಿತಿಯಲ್ಲಿ ನಿಲ್ಲಿ. ಬಲಮಂಡಿಯನ್ನು ಮಡಿಸಿ ಬಲಪಾದವನ್ನು ಎಡತೊಡೆಯ ಮೇಲಿಟ್ಟು, ಹಿಮ್ಮಡಿಯು ಎಡತೊಡೆಯ ಮೂಲದಲ್ಲಿ ಇರುವಂತೆ ನೋಡಿಕೊಳ್ಳಿ.
2. ಎರಡು ಕೈಗಳನ್ನು ಉಸಿರು ತೆಗೆದುಕೊಳ್ಳುತ್ತಾ ಪಕ್ಕದಿಂದ ಮೇಲಕ್ಕೆತ್ತಿ ಅಂಗೈಗಳನ್ನು ಜೋಡಿಸಿ. ದೃಷ್ಟಿ ಮುಂದಕ್ಕೆ. ದೇಹದ ಸಮತೋಲನ ತಪ್ಪದಂತೆ ನಿಂತುಕೊಳ್ಳಿ. (ಚಿತ್ರದಲ್ಲಿ ತೋರಿಸಿದಂತೆ)
3. ಉಸಿರು ಬಿಡುತ್ತಾ ಕೈಗಳನ್ನು ಪಕ್ಕದಿಂದ ಕೆಳ ತನ್ನಿ. ಬಲಪಾದ ಕೆಳಗಿಳಿಸಿ ಸಮಸ್ಥಿತಿಗೆ ಬನ್ನಿ.
4. ಇದೇ ರೀತಿ ಎಡಗಾಲಿನಿಂದ ಮಾಡಿ. (ಮೊದಮೊದಲು ಗೋಡೆಯ ಆಸರೆ ಪಡೆದು ಮಾಡಬಹುದು)

**ಉಪಯೋಗ:** ಎತ್ತರ ಬೆಳೆಯುವುದಕ್ಕೆ ಉಪಯುಕ್ತ ಆಸನ. ಕಾಲಿನ ಮತ್ತು ಪೃಷ್ಠಭಾಗದ ಸ್ನಾಯುಗಳು ಬಲಗೊಳ್ಳುತ್ತವೆ. (ಗಂಗೆಯನ್ನು ಭೂಮಿಗೆ ತರಲು ಭಗೀರಥ ತಪಸ್ಸು ಮಾಡಿದ ಆಸನ)

## ವದತ ಸಂಸ್ಕೃತಮ್

ವಿದ್ಯಾ : **ಸರ್ವಾಃ ಮಿಲಿತ್ವಾ ವನವಿಹಾರಂ ಗಚ್ಛಾಮಃ ವಾ?**
(ಎಲ್ಲರೂ ಸೇರಿ ವನವಿಹಾರಕ್ಕೆ ಹೋಗೋಣವೇ?)

ಸಂಧ್ಯಾ : **ಸತ್ಯಂ ಬಹು ದಿನಾನಿ ಜಾತಾನಿ। ರವಿವಾಸರೇ ಗಚ್ಛಾಮಃ।**
(ನಿಜ. ತುಂಬಾ ದಿನಗಳಾದವು. ಭಾನುವಾರ ಹೋಗೋಣ.)

ವಿದ್ಯಾ : **ಇದಾನೀಂ ವನೇ ಬಹವಃ ವೃಕ್ಷಾಃ ಸಂತಿ ವಾ?**
(ಈಗಲೂ ಕಾಡಿನಲ್ಲಿ ತುಂಬಾ ಮರಗಳು ಇವೆಯಾ?)

ಮೇಧಾ : **ಗತಸಂವತ್ಸರೇ ಅಹಂ ಅಗ್ರಜೇನ ಸಾಕಂ ಗತವತೀ । ನಾನಾ ವೃಕ್ಷಾಃ ಸಂತಿ।**
(ಹಿಂದಿನ ವರ್ಷ ನಾನು ಅಣ್ಣನ ಜೊತೆಗೆ ಹೋಗಿದ್ದೆ. ತುಂಬಾ ಮರಗಳಿದ್ದವು.)

ವಿದ್ಯಾ : **ಕಾನಿ? ಕಾನಿ?**
(ಯಾವುವು?)

ಮೇಧಾ : **ಸಾಲ, ವೇಣು, ವಟ, ಅಶ್ವತ್ಥ, ಅರ್ಜುನ, ಜಂಬುಕ, ಆಮ್ರ, ಆಮಲಕ, ಬದರೀ, ಬಿಲ್ವ, ಇತ್ಯಾದಯಃ ವೃಕ್ಷಾಃ ಸಂತಿ।**
(ಸಾಲ, ಬಿದಿರು, ಅಶ್ವತ್ಥ, ಮುತ್ತುಗ, ನೇರಳೆ, ಮಾವು, ನೆಲ್ಲಿಕಾಯಿ, ಎಲಚೀ, ಬಿಲ್ವ, ಇತ್ಯಾದಿ ಮರಗಳು ಇವೆ.)

# ನಿರ್ದೇಶಕರ ನುಡಿ

## ಸಾಧಕರೊಂದಿಗೆ ಸಂವಾದ – ಒಂದು ಪ್ರೇರಣೆ

* ನಿಮಗೆ ಜೀವನದಲ್ಲಿ ಬೇಸರವಾಗಿ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ಯಾವತ್ತಾದರೂ ಅನಿಸಿದೆಯೆ?

  ನನಗೆ ಜೀವನದಲ್ಲಿ ಎಂದೂ ಆತ್ಮಹತ್ಯೆ ವಿಚಾರ ಬಂದೇ ಇಲ್ಲ. ಕಾರಣ ನಾನು ಜೀವನವನ್ನು ಪ್ರೀತಿಸುತ್ತೇನೆ.

* ನಿಮ್ಮ ಮನೆಯವರಿಗೆ ನೀವು ಭಾರ ಎನಿಸಿದೆಯೇ?

  ನಮ್ಮ ಮನೆಯವರಿಗೆ ನಾನು ಯಾವತ್ತು ಭಾರ ಎನಿಸಿಲ್ಲ.

* ನಿಮ್ಮ ಜೀವನದ ಅತ್ಯಂತ ಆನಂದದ ಕ್ಷಣ ಯಾವುದು?

  ನನಗೆ ಜೀವನದ ಪ್ರತಿಯೊಂದು ಕ್ಷಣವೂ ಆನಂದದಾಯಕ ವಾಗಿದೆ. ಕಾರಣ ನಾನು ನೋವಿನಲ್ಲೂ ಆನಂದ ಕಾಣುತ್ತೇನೆ.

* ನಿಮ್ಮ ಮನೆಯವರು ನಿಮ್ಮಿಂದ ಸಹಾಯ ಪಡೆಯುತ್ತಿದ್ದಾರೆಯೇ?

  ಇಲ್ಲ. ನಾನು ಬ್ಯಾಂಕ್ ಉದ್ಯೋಗಿಯಾಗಿ ಸಂಪಾದಿಸುತ್ತಿರುವುದರಿಂದ ಬಡವರಿಗೆ ಸಹಾಯ ಮಾಡುತ್ತೇನೆ.

* ಅವಿಸ್ಮರಣೀಯ ಘಟನೆ ಯಾವುದು?

  ಹಲವಾರು ಅವಿಸ್ಮರಣೀಯ ಘಟನೆಗಳಿರುವುದರಿಂದ ಯಾವುದನ್ನು ಹೇಳಲಿ? ಇರಲಿ, ಒಂದನ್ನು ಹೇಳುತ್ತೇನೆ. ಅಲಹಾಬಾದಿನಲ್ಲಿ 100 ಮೀ ಓಟದ ಸ್ಪರ್ಧೆಗೆ ತಮ್ಮನ ಜೊತೆ ಹೋದೆ ರಾತ್ರಿ 9 ಘಂಟೆಗೆ ಗೊತ್ತಾಯಿತು ನಾನು ಉಪಯೋಗಿಸುವ ಗಾಲಿ ಕುರ್ಚಿ ಸ್ಪರ್ಧೆಗೆ ಸೂಕ್ತವಾಗಿಲ್ಲ ಬೇರೊಂದು ವಿನ್ಯಾಸದ ಗಾಲಿ ಕುರ್ಚಿಯೇ ಬೇಕೆಂದು. ಏನು ಮಾಡಲಿ? ಒಬ್ಬ ಪುಣ್ಯಾತ್ಮ ತನ್ನ ಗಾಲಿ ಕುರ್ಚಿಯನ್ನು ಕೊಟ್ಟ. ರಾತ್ರಿ 12 ಘಂಟೆವರೆಗೆ ಅದನ್ನು ಅಭ್ಯಾಸ ಮಾಡಿದೆ. ಬೆಳಗ್ಗೆ ಸ್ಪರ್ಧಾ ಸ್ಥಳಕ್ಕೆ ಹೋದರೆ ಮಹಿಳಾ ಸ್ಪರ್ಧಾಳುಗಳು ಯಾರು ಇಲ್ಲ. ಪುರುಷರ ಜೊತೆ ನೀವು ಸ್ಪರ್ಧಿಸಬಹುದು ಎಂದು ಹೇಳಿದರು. ಈ ವ್ಯರ್ಥ ಸಾಹಸ ಬೇಡ ವಾಪಸ್ ಹೋಗೋಣ ಎಂದು ತಮ್ಮನ ಒತ್ತಾಯ. ಆದರೆ ಸ್ಪರ್ಧಿಸಲು ನಿಶ್ಚಯಿಸಿದ ನಾನು ಸ್ಪರ್ಧೆಗೆ ಸಿದ್ಧವಾದೆ. ಒಮ್ಮೆ ಆಚೆ ಈಚೆ ಕಣ್ಣಾಡಿಸಿದಾಗ ಆರು ಅಡಿ ಎತ್ತರದ ಮೂರು ಅಡಿ ಅಗಲದ ಆಜಾನುಬಾಹು ವಿಕಲಾಂಗ ಗಾಯಾಳು ಸೈನಿಕರ ಜೊತೆ ನಾನು ಸ್ಪರ್ಧಿಸಬೇಕೆಂದು ತಿಳಿಯಿತು. ಜನರೆಲ್ಲ "ಈ ಹುಳ್ಳಿ ಏನು ಮಾಡುತ್ತಾಳೆ"ಎಂದು ಕೇಕೇ ಹಾಕಿ ನಗುತ್ತಿದ್ದರು. ನಾನು ಗೆಲ್ಲುವುದು ಕನಸಿನ ಮಾತು ಆದರೆ ಸ್ಪರ್ಧಿಸಿದ ಏಳು ಜನರಲ್ಲಿ ಒಬ್ಬರಾದರೂ ನನ್ನ ಹಿಂದೆ ಇರುವಂತೆ ಮಾಡು ಎಂದು ದೇವರಲ್ಲಿ ಮೊರೆ ಇಟ್ಟೆ. ಸ್ಪರ್ಧೆ ಪ್ರಾರಂಭವಾಯಿತು. ಏಳು ಜನರು ನನ್ನ ಹಿಂದೆ ಇದ್ದು ನಾನೂ ಮೊದಲ ಸ್ಥಾನ ಪಡೆದು ಚಿನ್ನದ ಪದಕ ಗಳಿಸಿದೆ.

ಇದೆಲ್ಲ ಸರಿ ಇದು ಯಾರ ಕಥೆ ಇರಬಹುದು? ಮೂರನೇ ವಯಸ್ಸಿನಲ್ಲಿ ಪೋಲಿಯೋ ಪೀಡಿತಳಾಗಿ ಚೆನ್ನೈನ ಆಸ್ಪತ್ರೆಯೊಂದರಲ್ಲಿ 14 ವರ್ಷವಿದ್ದು 23 ಆಪರೇಷನ್‌ಗೆ ಒಳಗಾಗಿರುವ ಅಂಗವಿಕಲ ಶ್ರೇಷ್ಠ ಕ್ರೀಡಾಪಟು ಸೋದರಿ ಮಾಲತಿ ಹೊಳ್ಳ. ಸೊಂಟದ ಕೆಳಭಾಗ ಪೂರ್ತಿ ನಿಷ್ಕ್ರಿಯ. ಆದರೆ ಮುಖದಲ್ಲಿ ಸದಾ ಮಂದಹಾಸ. ಆತ್ಮವಿಶ್ವಾಸದ ಪ್ರತಿ ಮೂರ್ತಿ. ಪದ್ಮಶ್ರೀ, ಅರ್ಜುನ ಪ್ರಶಸ್ತಿಗಳಲ್ಲದೇ ಇನ್ನೂ ನೂರಾರು ಪ್ರಶಸ್ತಿಗಳು ಇವರನ್ನು ಹುಡುಕಿಕೊಂಡು ಬಂದಿವೆ. ತಮ್ಮ 50 ನೇ ವಯಸ್ಸಿನಲ್ಲಿ ಕೂಡ ಗುಂಡೆಸೆತ ಹಾಗೂ ಓಟದಲ್ಲಿ 20ರ ಹರೆಯದ ಉತ್ಸಾಹ ಕಂಡಾಗ ಬೆರಗಾಗುತ್ತೇವೆ. ನಾನೀಗ ಬರೆಯುತ್ತಿರುವಾಗಲೇ ಒಂದು ಪ್ರಶಸ್ತಿ ಸ್ವೀಕರಿಸಲು ಮುಂಬಯಿಗೆ ಹೋಗಿದ್ದಾರೆ.

ಈ ವರ್ಷದ ಮಹಿಳಾ ಸೇವಾವ್ರತಿ ಶಿಬಿರದಲ್ಲಿ ಇವರ ಜೀವದ ಗೆಳತಿ ಪೋಲಿಯೋ ಪೀಡಿತ ಸೋದರಿ ಗೀತಾ (ಅವರು ಕೂಡ ಒಂದು ಬ್ಯಾಂಕ್ ಮ್ಯಾನೇಜರ್) ಜೊತೆ ಸಾಧಕರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು ಶಿಬಿರಾರ್ಥಿಗಳ ಪ್ರಶ್ನೆಗಳಿಗೆ ಉತ್ತರಿಸುತ್ತಾ ಎಲ್ಲರ ಆತ್ಮವಿಶ್ವಾಸ ಹೆಚ್ಚುವಂತೆ ಮಾಡಿ ನಾವು ಏನಾದರೂ ಸಾಧಿಸಬೇಕೆಂಬ ಛಲ ಪ್ರತಿಯೊಬ್ಬರಲ್ಲೂ ಮೂಡಿಸಿದರು.

ಸೋದರಿ ಮಾಲತಿಯವರು ತಮ್ಮ ತಂದೆಯ ಮಾತನ್ನು ನೆನಪಿಸಿಕೊಳ್ಳುತ್ತಿದ್ದರು. ಬೆಂಗಳೂರಿನ ಅಮ್ಮಣ್ಣಿ ಕಾಲೇಜ್‌ಗೆ ಸೇರಿದಾಗ ಮೂರನೇ ಮಹಡಿಯಲ್ಲಿರುವ ತರಗತಿ ಹತ್ತುವುದಾದರೂ ಹೇಗೆ? ಜೊತೆಗೆ ಉಳಿದ ವಿದ್ಯಾರ್ಥಿಗಳ ಅಪಹಾಸ್ಯ, ವ್ಯಂಗ್ಯದ ಮಾತಿನಿಂದ ಬೇಸತ್ತು ಕಾಲೇಜ್‌ಗೆ ಹೋಗುವುದಿಲ್ಲ ಎಂದು ಹಟ ಹಿಡಿದಾಗ ತಂದೆ "ನೋಡು ನಿನ್ನ ಭವಿಷ್ಯ ನೀನೇ ರೂಪಿಸಿಕೊಳ್ಳಬೇಕು. ನಾನಾಗಲಿ ನಿನ್ನ ತಮ್ಮಂದಿರೂ ಕೂಡ ನಿನ್ನನ್ನು ನೋಡಿಕೊಳ್ಳುತ್ತಾರೆಂದು ನಿರೀಕ್ಷಿಸಬೇಡ. ಪರಾವಲಂಬಿಯಾಗಬೇಡ. ನಿನಗೆ ಏನು ಬೇಕೆಂದು ಯಾರೂ ಕೇಳಿ ಕೊಡುವುದಿಲ್ಲ. ನಿನಗೆ ಬೇಕಾಗಿದ್ದನ್ನು ನೀನೇ ಕೇಳಿ ಪಡೆಯಬೇಕು" ಎಂದರಂತೆ. ಮರುದಿನ ಕಾಲೇಜಿಗೆ ಹೋಗಿ ಮಹಡಿ ಹತ್ತಲು ಸಾಧ್ಯವಾಗುವುದಿಲ್ಲ ತರಗತಿಯನ್ನು ಕೆಳಗೆ ಮಾಡಿ ಎಂದು ಪ್ರಾಂಶುಪಾಲರನ್ನು ಕೇಳಿಕೊಂಡಾಗ ತರಗತಿ ಕೆಳಗೆ ಪ್ರಾರಂಭವಾಯಿತು. ಜೀವನದ ಬಗ್ಗೆ ನನ್ನ ದೃಷ್ಟಿಕೋನ, ಆತ್ಮವಿಶ್ವಾಸ, ಮಾನಸಿಕ ಸ್ಥೈರ್ಯ ಇದಕ್ಕೆಲ್ಲ ನನ್ನ ತಂದೆಯವರ ಮಾರ್ಗದರ್ಶನವೇ ಕಾರಣ ಎಂದರು. "ಈಗ ನಾನು ಮಹಾರಾಣಿ. ನನ್ನ ಗಾಲಿ ಕುರ್ಚಿಯೇ ನನ್ನ ಸಿಂಹಾಸನ" ಎಂದು ನಗುನಗುತ್ತಾ ಹೇಳಿದಾಗ ಎಲ್ಲರ ಕಣ್ಣಾಲಿಗಳು ತುಂಬಿ ಬಂದವು. ಆ ನನ್ನ ಪ್ರೀತಿಯ ಸೋದರಿಯ ಪ್ರೇರಣಾದಾಯಿ ಜೀವನ ನಮಗೆಲ್ಲ ಸದಾ ಸ್ಫೂರ್ತಿಯನ್ನು ನೀಡುತ್ತಿರಲಿ ಎಂದು ಹಾರೈಸುವೆ.

- ಶ್ರೀಧರ ಸಾಗರ

## ಸಂತ ವಚನ

ವಿಕಲಚೇತನರಿಗೆ ಕೊಟ್ಟ ದಾನ ದೇವರಿಗೆ ಅರ್ಪಿಸಿದ ಕಾಣಿಕೆಯಂತೆ. ದೇವರು ನಮಗೆ ಕೊಟ್ಟುದುದರಲ್ಲಿ ಒಂದಂಶವನ್ನು ದೇವರೇ ಸೃಷ್ಟಿಸಿದ ಅಸಹಾಯಕರಾದ ವಿಕಲಚೇತನರಿಗೆ ನೆರವು ನೀಡುವುದೇ ನಾವು ದೇವರಿಗೊಪ್ಪಿಸುವ ಪೂಜೆ.

– ಶ್ರೀ ವಿಶ್ವೇಶತೀರ್ಥ ಸ್ವಾಮೀಜಿ

## ಅಮೃತ ಬಿಂದು

ಜಿತೇಂದ್ರಿಯತ್ವಂ ವಿನಯಸ್ಯ ಕಾರಣಮ್  
ಗುಣಪ್ರಕರ್ಷೋ ವಿನಯಾದವಾಪ್ಯತೇ।  
ಗುಣಾಧಿಕೇ ಪುಂಸಿ ಜನೋಽನುರಜ್ಯತೇ  
ಜನಾನುರಾಗಪ್ರಭವಾಃ ಹಿ ಸಂಪದಃ ॥

ಇಂದ್ರಿಯಗಳು ವಶದಲ್ಲಿದ್ದರೆ ವಿನಯವು ಬೆಳೆಯುತ್ತದೆ. ವಿನಯವಿದ್ದರೆ ಸದ್ಗುಣಗಳು ಹೆಚ್ಚುತ್ತವೆ. ಸದ್ಗುಣಗಳುಳ್ಳ ವ್ಯಕ್ತಿಯನ್ನು ಜನರು ಮೆಚ್ಚುವರು. ಜನರ ಪ್ರೀತಿ ಸಂಪಾದಿಸಿದರೆ ಐಶ್ವರ್ಯವು ತಾನಾಗಿಯೇ ಬರುವುದು.

# ಸೇವಾವ್ರತಿಗಳೇ ~ ಸಹಕಾರಿಗಳೇ ~ ದೇವರು

## ಡಿಸೆಂಬರ್ 4ರಂದು ಅಜಿತರ ಪುಣ್ಯತಿಥಿ – ಅಂದು ಸೇವಾದಿನ



ಪ್ರತಿಷ್ಠಾನ ಸಂಸ್ಥಾಪಕ ನಿರ್ದೇಶಕ
ದಿ। ಅಜಿತ್‌ಕುಮಾರ್

ಈ ಪವಾಡ ಆದುದಾದರೂ ಹೇಗೆ? ಅಜಿತಕುಮಾರು ಒಬ್ಬ ಅನುಭವಿ ಪ್ರಚಾರಕ್. ಸ್ವಯಂ ಸೇವಕರನ್ನು, ಸಹಕಾರಿಗಳನ್ನು ದೇವರೆಂದು ತಿಳಿದು ನಡೆಯುವ ದೃಷ್ಟಿ ಇದ್ದವರು. ಅದೇ ದೃಷ್ಟಿಯನ್ನೇ ಮುಂದುವರೆಸಿ ಸಾಮಾಜಿಕ ಪುನರುತ್ಥಾನ ಆಂದೋಲನದಲ್ಲಿ ತಮ್ಮ ಜೀವನವನ್ನು ತೊಡಗಿಸಿಕೊಂಡ ಸೇವಾವ್ರತಿಗಳ ಬಗೆಗೆ ಅವರದು ಅಪಾರ ಪ್ರೇಮ. ಎಲ್ಲೇ ಇರಲಿ ಸೇವಾವ್ರತಿಗಳನ್ನು ಭೇಟಿ ಮಾಡುವ, ಅವರ ಯೋಗಕ್ಷೇಮ ವಿಚಾರಿಸುವ, ಸಮಸ್ಯೆ ಪರಿಹರಿಸುವ ಕೆಲಸಕ್ಕೆ ಆದ್ಯತೆ ಕೊಡುತ್ತಿದ್ದರು. ಯಾವುದೇ ಸೇವಾವ್ರತಿಗೆ ವ್ಯವಸ್ಥೆಯಲ್ಲಿ ಕೊರತೆ ಆದಾಗ, ರಕ್ಷಣೆ – ಭದ್ರತೆ ಇಲ್ಲವೆಂದಾಗ ಅವರು ದೂರ್ವಾಸರಂತೆ ಕೋಪಗೊಂಡುದೂ ಉಂಟು. ಸೇವಾವ್ರತಿಗಳಿಂದಲೇ ಪ್ರತಿಷ್ಠಾನ, ಅವರ ಶಕ್ತಿ, ಕೀರ್ತಿಗಳೇ ಪ್ರತಿಷ್ಠಾನದ ಕೀರ್ತಿ ಎಂದು ನಂಬಿ ನಡೆದರು. ಆದರೆ ಇದಿಷ್ಟೂ ಅವರ ಭಾವನೆ. ಸೇವಾವ್ರತಿಗಳನ್ನು ದೇವರೆಂದು ಭಾವಿಸಿ, ಅವರ ಸೇವೆ ಮಾಡಿದರು – ನಿಜ. ಆದರೆ ಸೇವೆ ಸ್ವೀಕರಿಸುತ್ತಿರುವವರಿಗೆ ತಾವು ಸೇವೆ ಪಡೆಯುತ್ತಿದ್ದೇವೆ ಎಂಬುದು ಗೊತ್ತಾಗಲಿಲ್ಲ. ಬದಲಾಗಿ ತಾವೂ ಏನೋ ಮಹತ್ತ್ವದ ಕಾರ್ಯ ಮಾಡುತ್ತಿದ್ದೇವೆ ಎಂಬ ವಿಶ್ವಾಸ ಬೆಳೆಸಿಕೊಂಡರು. ಅಷ್ಟೇ ಅಲ್ಲ ತಾವೂ ಅಜಿತರಂತೆಯೇ ಆಗುವ ದೃಷ್ಟಿ ಬೆಳೆಸಿಕೊಂಡರು. ಶಾಲಿವಾಹನ ಮಣ್ಣಿನಲ್ಲಿ ಜೀವ ತುಂಬುತ್ತಿದ್ದನಂತೆ. ಅದರಂತೆ ತಮ್ಮ ಊರಿನಲ್ಲಿ, ಮನೆಗಳಲ್ಲಿ ಯಾರಿಗೂ ತಿಳಿಯದೆ ಅಜ್ಞಾತರಾಗಿ ಧೂಳಾಗಿದ್ದ ಯುವಕರು, ಯುವತಿಯರು ಅಜಿತರ ಸಹವಾಸದಿಂದಾಗಿ ಸಮಾಜದಲ್ಲಿ ಪೂಜಾರ್ಹ ದೇವತೆಗಳಾದರು.

### ಕಲ್ಪವೃಕ್ಷದಂತೆ – ಧಾರಾಳ ದಾನಿ

ನಾವಿಬ್ಬರೂ ಒಟ್ಟಾಗಿದ್ದೆವು. ಚರ್ಚಿಸಿದೆವು – ಹೊಸ ಕಲ್ಪನೆಗಳ ಕುರಿತು ದಾರಿ ಹುಡುಕಿದೆವು. ವ್ಯಕ್ತಿಗಳ ಹಾಗೂ ಯೋಜನೆಗಳ ಹೊಂದಾಣಿಕೆ ಹೇಗೆ. ಸಮಸ್ಯೆಗಳ ಪರಿಹಾರ ಹೇಗೆ ಎಂದೆಲ್ಲ ಚಿಂತಿಸಿದೆವು. ಈ ಎಲ್ಲ ಸಂದರ್ಭದಲ್ಲೂ ಉಲ್ಲೇಖವಾಗುತ್ತಿದ್ದ ಭಾವ ಒಂದಿತ್ತು. ಜೀವನದಲ್ಲಿ ಪಡೆದುದಕ್ಕಿಂತ ಕೊಡುವುದು ಹೆಚ್ಚಾಗುವಂತೆ ಆದೀತೇ? ಕೆಲವೊಮ್ಮೆ ಹೇಳದಿದ್ದರೂ ಸೂಕ್ಷ್ಮವಾಗಿ ಅದೇ ಭಾವ ಬಲಿಯುತ್ತಿತ್ತು. ಆದರೆ ಆ ಆದರ್ಶವನ್ನು ಪಾಲಿಸುತ್ತಾ ಅದರ ಪ್ರತಿರೂಪವೇ ಆದರು. ಸೇವೆ ಹೇಗೆ ಮಾಡಬೇಕು ಎಂಬುದಕ್ಕೆ ಮೂರ್ತರೂಪ ಆದರು. ಚಿಕ್ಕದಾಗಿದ್ದಾಗ ಕುಡಿದ ಸ್ವಲ್ಪ ನೀರನ್ನೇ ನೆನಪಿಟ್ಟು ಜೀವನಪೂರ್ತಿ ಜಗತ್ತಿಗೆ ಸಿಹಿಯಾದ ಎಳನೀರನ್ನು ಕೊಡುವ ಕಲ್ಪವೃಕ್ಷದಂತೆ ಬೆಳೆದರು. ಚಿಕ್ಕವರಾಗಿದ್ದಾಗ ಸುತ್ತಲಿನ ಹಿರಿಯರಿಂದ ಪಡೆದುದೂ ಹೆಚ್ಚಿಲ್ಲ. ನಂತರ ಕೊಡಲು ಆರಂಭಿಸಿದಾಗ ಬೊಗಸೆ ಬೊಗಸೆ ಕೊಟ್ಟು ಶ್ರೀಮಂತರಾದರು. ಕಿರಿಯರಿಂದಲೂ ಏನೂ ಅಪೇಕ್ಷಿಸದೇ ಅವರಿಗೂ ಕೈಎತ್ತಿ ಸಮೃದ್ಧವಾಗಿ ಶಕ್ತಿ, ವಿವೇಕ ನೀಡಿದ ವಿವೇಕಿ, ಯೋಗಾಚಾರ್ಯ, ಭಾರತವರ್ಷದಲ್ಲಿ ಸೇವಾಕಾರ್ಯಕ್ಕೆ ಹೊಸ ಆಯಾಮ ನೀಡಿದ ಸೇವಾಮೂರ್ತಿ.

### ಮಾಲಿಯ ಆರೈಕೆ

ಮಾನ್ಯ ಹೊ.ವೆ. ಶೇಷಾದ್ರಿಯವರು ಅಜಿತರ ಕುರಿತು ಆಡಿರುವ ಮಾತುಗಳು ಅವರ ವ್ಯಕ್ತಿತ್ವದ ಹಾಗೂ ವೈಶಾಲ್ಯದ ಚಿತ್ರ ನೀಡುತ್ತವೆ:

"ಹಿಂದು ಸೇವಾ ಪ್ರತಿಷ್ಠಾನವು ಇಷ್ಟು ವೇಗದಲ್ಲಿ ಇಷ್ಟು ಮುಖಗಳಲ್ಲಿ ಹಬ್ಬಿ ಬೆಳೆದಿರುವುದನ್ನು ಕಂಡವರು. ಕೇಳಿದವರು ಎಲ್ಲರೂ ಇದರ ಮೂಲಪುರುಷ ಯಾರು ಎಂದು ಕೇಳುವುದು ಸಹಜ. ಅಜಿತಕುಮಾರರ ಬೆಟ್ಟದಂತಹ ಕಾರ್ಯ ಪ್ರತಿಭೆ – ಕಾರ್ಯ ಸಾಮರ್ಥ್ಯದ ಅರಿವಾಗಿ ಬೆರಗಾಗುವರು. ಆದರೆ ಸಂಘದ ಅಂತರ್ಯ ತಿಳಿದವರು ಇಷ್ಟರಿಂದಲೇ ತೃಪ್ತರಾಗರು. ಇದೇನು ಒಂಟಿ ಕಂಬದ ಭವನವೇ? ಎನ್ನುವ ಪ್ರಶ್ನೆ ಅವರು ತಮ್ಮ ಮನಸ್ಸಿನೊಳಗೆಯೇ ಕೇಳುವರು. ಸಂಘದ ಕಾರ್ಯಕರ್ತನ ಯಶಸ್ಸಿನ ನಿಜವಾದ ಒರೆಗಲ್ಲು ಯಾವುದು, ಎಂದು ಅವರು ಬಲ್ಲರು. ತನ್ನಂತೆಯೇ ಜೀವ ಸುರಿದು ಕೆಲಸ ಮಾಡುವವರನ್ನು ಅವನು ಸೃಷ್ಟಿಸಿದ್ದಾನೆಯೇ? ಅವನು ಕಣ್ಮರೆಯಾದ ನಂತರವೂ ಅವನ ಕನಸನ್ನು ನನಸಾಗಿಸುವಂತಹ ಹತ್ತಾರು – ನೂರಾರು ಮಂದಿ ಇದ್ದಾರೆಯೇ? ಕಾರ್ಯವೃಕ್ಷದ ಎಲೆ ಚಿಗುರು – ರೆಂಬೆಕೊಂಬೆ, ಹೂವುಹಣ್ಣುಗಳ ವೈಭವವನ್ನು ಕಂಡಮಾತ್ರಕ್ಕೆ ಸಂಭ್ರಮಪಡುವವರು ಅನೇಕರು. ಆದರೆ ಮಾಲಿ ಅಷ್ಟರಿಂದಲೇ ತೃಪ್ತನಾಗಲಾರ, ಅವನ ದೃಷ್ಟಿಯೇ ಬೇರೆ ಕಡೆ. ಗಿಡದ ಬುಡದತ್ತ, ಅದರ ನಿರಂತರ ಆರೈಕೆಯತ್ತ, ಅದರ ಪಾತಿಯತ್ತ, ಅದಕ್ಕೆ ಅವಶ್ಯಕ ನೀರುಗೊಬ್ಬರಗಳ ಪೂರೈಕೆಯತ್ತ. ಅವನ ಮುಖ್ಯ ಚಿಂತೆ ಬೇರು. ಅದು ಸದಾ ಹೆಚ್ಚು ಹೆಚ್ಚು ಆಳಕ್ಕೆ ಹೋಗುತ್ತಿದೆಯೇ? ತಾಯಿಬೇರು ಭೂಮಿಯ ಮಡಿಲಲ್ಲಿ ಹೆಚ್ಚು ಹೆಚ್ಚು ವಿಸ್ತರಿಸುತ್ತಾ ಅವಳ ಎದೆ ಹಾಲನ್ನು ಹೆಚ್ಚು ಹೆಚ್ಚು ಹೀರಲು ಸಮರ್ಥವಾಗುತ್ತಿದೆಯೇ? ಎನ್ನುವತ್ತ. ಅಂತಹ ಮಾಲಿಯ ಪಾತ್ರ ಹೆಚ್ಚು ಹೆಚ್ಚು ಸಮರ್ಥವಾಗಿ ನಿರ್ವಹಿಸುವಂತಹನೇ ನಿಜವಾದ ಸಂಘದ ಕಾರ್ಯಕರ್ತ. ಸಂಘದ ಸ್ಥಾಪಕ ಪೂಜ್ಯ ಡಾ ॥ ಹೆಡಗೇವಾರರು ಸ್ವತಃ ಹಾಕಿಕೊಟ್ಟ ಮೇಲ್ಪಂಕ್ತಿಯೇ ಅದು, ಸಂಘದ ಇದುವರೆಗಿನ ಯಶಸ್ಸಿನ ರಹಸ್ಯವೇ ಅದು. ಅಜಿತಕುಮಾರರ ಜೀವನ ಸಾಧನೆಯ ತಿರುಳೂ ಅದೇ. ಸಂಘದಲ್ಲಷ್ಟೇ ಅಲ್ಲ, ಹಿಂದು ಸೇವಾ ಪ್ರತಿಷ್ಠಾನದಲ್ಲೂ ಸೇವಾವ್ರತಿಯರ ತರಬೇತಿಗೇ ಸರ್ವಾಧಿಕ ಮಹತ್ವ ಅವರ ದೃಷ್ಟಿಯಲ್ಲಿ. ಸೇವಾವ್ರತಿಯರಿಗೆ ಮೂರು ವರ್ಷದ್ದಷ್ಟೆ ಬಂಧನ. ಅನಂತರವೂ ಮುಂದುವರೆಯುವುದು, ಬಿಡುವುದು ಅವರವರಿಗೆ ಬಿಟ್ಟದ್ದು. ಆದರೆ ಮುಂದುವರೆಯಬಲ್ಲಂತಹರು ಎನಿಸುವಂತಹರ ಮೇಲೆ ಅಜಿತರ ವಿಶೇಷ ಕಣ್ಣು. ಅಂತಹವರ ಮನೋಧರ್ಮ – ಸ್ವಭಾವ – ನಡೆನುಡಿ, ಕಾರ್ಯಶೈಲಿಗಳಿಗೆ ಸಂಬಂಧಪಟ್ಟಂತೆ ಪ್ರತಿಯೊಂದು ಸಣ್ಣಪುಟ್ಟ ಸಂಗತಿಯ ಕಡೆಗೂ ಅಜಿತರ ಕಟಾಕ್ಷ. ಅವರವರು ಕೆಲಸ ಮಾಡುವ ಕಾರ್ಯಕ್ಷೇತ್ರವನ್ನು, ಅಲ್ಲಿನ ಪರಿಸರವನ್ನು, ಗಮನದಲ್ಲಿಟ್ಟುಕೊಂಡು ಅವಶ್ಯಕ ಸೂಚನೆಗಳೂ. ಪ್ರತಿಯೊಂದು ಸಂದರ್ಭದಲ್ಲಿಯೂ ಸೇವಾವ್ರತಿಯರಲ್ಲಿ ದೀರ್ಘಕಾಲ ಮುಂದುವರೆಯುವಂತಹ ಸಂಕಲ್ಪಶಕ್ತಿ. ಕಠೋರವಾಗುವತ್ತ ಗಮನ. ಯಾವುದೇ ಸಣ್ಣ ಕೆಲಸವಿರಲಿ ಅದು ಅಚ್ಚುಕಟ್ಟಾಗಿಯೇ ಆಗಬೇಕು. ಅದಕ್ಕೆ ಹೆಚ್ಚಿನ ಒತ್ತು. ಸ್ವಂತದ ಬಗ್ಗೆ ಎಳ್ಳಷ್ಟು ಶೈಥಿಲ್ಯ – ರಿಯಾಯಿತಿಗೆ ಅವಕಾಶವೀಯದ ವಜ್ರಕಠೋರ ವೃತ್ತಿ. ಇತರರ ಬಗೆಗೆ ಮಾತ್ರ ಔದಾರ್ಯದೊಂದಿಗೆ ಅವರನ್ನು ಸುಧಾರಿಸುವತ್ತ ನಿತ್ಯಗಮನ. ಅದಕ್ಕಾಗಿ ನವಿರಾದ ವ್ಯಂಗ್ಯ, ಹಾಸ್ಯ, ಆತ್ಮ ನಿರೀಕ್ಷಣೆ ಕೆರಳಿಸುವ ಸೂಚ್ಯ ಪ್ರಶ್ನೆಗಳು ಕೊರತೆಬಿದ್ದಲ್ಲಿ ಸ್ವತಃ ಅದನ್ನು ನೀಗಿಸುವ ಮೇಲ್ಪಂಕ್ತಿ. ಇವೆಲ್ಲದರ ಸುಂದರ ಫಲವಾಗಿ ದೀರ್ಘಾವಧಿ ಸಿದ್ಧತೆಯೊಂದಿಗೆ ಕಾರ್ಯರಂಗದಲ್ಲಿ ತೊಡಗಿರುವಂತಹ ಸಹಕಾರಿಗಳ ಕೇಂದ್ರೀಯ ತಂಡದ ನಿರ್ಮಿತಿ. ಇದೀಗ ಅಜಿತ್‌ಕುಮಾರ್ ಶಾರೀರಿಕವಾಗಿ ಕಣ್ಣೆದುರು ಇಲ್ಲ. ಆದರೆ ಅವರ ಒಂದೊಂದು ಕಲ್ಪನೆ – ನಿರೀಕ್ಷೆಗಳನ್ನು ಪೂರ್ಣಗೊಳಿಸುವ ಛಲ ತೊಟ್ಟು ಹೊರಟಿರುವಂತಹ ತಂಡ ಅದು. ಅಜಿತಕುಮಾರರ ನಿಜವಾದ ಮಾನಸ ಪುತ್ರಿಯರು – ಪುತ್ರರು ಅವರು. ಹಿಂದು ಸೇವಾ ಪ್ರತಿಷ್ಠಾನಕ್ಕಾಗಿ ಅಜಿತಕುಮಾರ್ ಬಿಟ್ಟು ಹೋಗಿರುವ ನಿಜವಾದ ಆಸ್ತಿಯೇ ಅವರು.

ಅನೀ ಹುಟಕ್ಕೆ

# ಶಿಶುಮಂದಿರ ಉದ್ಘಾಟನೆ



**ನೆಲ್ಯಾಡಿ :** ನೆಲ್ಯಾಡಿಯಲ್ಲಿ ಶ್ರೀರಾಮ ಶಿಶು ಮಂದಿರವು ಅಕ್ಟೋಬರ್ 20ರ ಮಂಗಳವಾರದಂದು ಉದ್ಘಾಟನೆಗೊಂಡಿತು. ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ದಕ್ಷಿಣ ಪ್ರಾಂತ ಕಾರ್ಯವಾಹ ಡಾ. ಕಲ್ಲಡ್ಕ ಪ್ರಭಾಕರ ಭಟ್‌ರವರು, ರಾಮಾಯಣ ಮಹಾಭಾರತ ಭಗವದ್ಗೀತೆ ಮೊದಲಾದ ಹಿಂದೂ ಧರ್ಮಗ್ರಂಥಗಳಲ್ಲಿ ಶ್ರೇಷ್ಠವಾದ ಜೀವನ ಕಲೆಯನ್ನು ತಿಳಿಸಲಾಗಿದೆ. ಅಂತಹ ಧರ್ಮಗ್ರಂಥಗಳನ್ನು ಆಡಳಿತಾರೂಢರು ಸಂಕುಚಿತ ದೃಷ್ಟಿಕೋನದಲ್ಲಿ ಕಂಡ ಕಾರಣದಿಂದ ಇಂದು ಶ್ರೇಷ್ಠ ಜೀವನಕಲೆ ನಾಶವಾಗುತ್ತಿದೆ. ಪೂಜನೀಯರೆಂದು ಗೌರವಿಸಲ್ಪಡಬೇಕಾದ ಹಿರಿಯರು ವೃದ್ಧಾಶ್ರಮವನ್ನು ಸೇರುವ ಮಟ್ಟಿಗೆ ಸಮಾಜ ಬದಲಾಗಿದೆ. ಇನ್ನೊಂದೆಡೆ ಅಸ್ಪೃಶ್ಯತೆ ಎಂಬ ಪೆಡಂಭೂತ ಹಿಂದೂ ಸಮಾಜವನ್ನು ದುರ್ಬಲಗೊಳಿಸುತ್ತಿದ್ದು, ಇದರ ನಿವಾರಣೆಗೆ ಸಮಾಜ ಕಟಿಬದ್ಧವಾಗಿ ಶ್ರಮಿಸಬೇಕಾಗಿದೆ. ಈ ಎಲ್ಲಾ ಸಮಸ್ಯೆಗಳ ನಿವಾರಣೆಗೆ ಸಮಾಜವನ್ನು ಸಂಸ್ಕಾರಯುತಗೊಳಿಸುವ ಕಾರ್ಯ ಶಿಶುಮಂದಿರದಿಂದ ನಡೆಯುತ್ತಿದೆ ಎಂದರು.

ಸಭಾಧ್ಯಕ್ಷತೆ ವಹಿಸಿ ಮಾತನಾಡಿದ ಸಂಸದ ನಳಿನ್‌ಕುಮಾರ್ ಕಟೀಲ್‌ರವರು ಶಿಕ್ಷಣದ ವ್ಯಾಪಾರೀಕರಣ ಸಲ್ಲದು, ಅಂತೆಯೇ ಬಿಲ್–ಬೆಲ್ ಶಿಕ್ಷಣವೂ ಸಲ್ಲದು. ಬದಲಾಗಿ ಜ್ಞಾನ ವಿಕಾಸದ ಶಿಕ್ಷಣ, ದೇಶ ಧರ್ಮ ಸಂಸ್ಕೃತಿಯ ಅರಿವು ನೀಡುವ ಶಿಕ್ಷಣ ದೊರೆಯಬೇಕಾಗಿದೆ. ಶಿಕ್ಷಣದಲ್ಲಿ ಈ ಭೂಮಿಯ ಸಂಸ್ಕಾರದ ವಿಷಯಗಳನ್ನು ನೀಡಿದಾಕ್ಷಣ ಕೇಸರೀಕರಣವೆಂದು ಗೋಳಿಡುವ ಮಂದಿಯನ್ನು ಕಡೆಗಣಿಸಿ, ಶಿಕ್ಷಣದಲ್ಲಿ ಭಾರತೀಯತ್ವವನ್ನು ಅಗತ್ಯವಾಗಿ ನೀಡಬೇಕಾಗಿದೆ ಎಂದರು. ಇಲ್ಲವಾದರೆ ಪಬ್ ಸಂಸ್ಕೃತಿ ಬೆಳೆಯಬಹುದೆಂದು ಎಚ್ಚರಿಸಿದರು.

ಕಾರ್ಯಕ್ರಮದಲ್ಲಿ ಸುಬ್ರಾಯ ನಾಯಕ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಶ್ರೀ ರಾಮ ಶಿಶು ಮಂದಿರದ ಅಧ್ಯಕ್ಷ ಸುಬ್ರಹ್ಮಣ್ಯ ಆಚಾರ್ ಸ್ವಾಗತಿಸಿ, ಕಾರ್ಯದರ್ಶಿ ರವಿ ಹೊಸವೊಕ್ಲು ವಂದಿಸಿದರು.

# ಉಪ್ಪಿನಂಗಡಿಯಲ್ಲಿ ವಿವಿಧ ಕಾರ್ಯಕ್ರಮಗಳು

## ಗೋ ಗ್ರಾಮ ಯಾತ್ರೆ

ಉಪ್ಪಿನಂಗಡಿ : ವಿಶ್ವ ಮಂಗಳ ಗೋ ಗ್ರಾಮ ಯಾತ್ರೆಯ ಅಂಗವಾಗಿ ಉಪ್ಪಿನಂಗಡಿಯ ಹಲವೆಡೆ ಸಾಮೂಹಿಕ ಗೋ ಪೂಜೆಯು ಇತ್ತೀಚೆಗೆ ನಡೆಯಿತು. ಉಪ್ಪಿನಂಗಡಿ ನಟ್ಟಿಬೈಲ್ ಪರಿಸರದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ವಿಶ್ವ ಮಂಗಳ ಗೋ ಗ್ರಾಮ ಯಾತ್ರೆಯ ಜಿಲ್ಲಾಧ್ಯಕ್ಷ ಧನ್ಯ ಕುಮಾರ್ ರೈ ಬಿಳಿಯೂರುಗುತ್ತುರವರು ವಿಧ್ಯುಕ್ತವಾಗಿ ಗೋಪೂಜೆಯನ್ನು ನೆರವೇರಿಸಿ ಈ ಮಣ್ಣಿನ ಸಂಸ್ಕೃತಿಯಲ್ಲಿ ಗೋವುಗಳ ಮಾತೃಸಮಾನವಾದ ಪಾತ್ರವನ್ನು ವಿವರಿಸಿ ಅದರ ರಕ್ಷಣೆಗಾಗಿ ಪ್ರತಿಯೋರ್ವರೂ ಕೈಜೋಡಿಸಬೇಕೆಂದು ಕರೆ ನೀಡಿದರು. ವಿಶ್ವ ಮಂಗಳ ಗೋ ಗ್ರಾಮ ಯಾತ್ರೆಯ ಗ್ರಾಮ ಸಮಿತಿಯ ಅಧ್ಯಕ್ಷ ಮನೋಜ್ ಶೆಟ್ಟಿ, ಕಾರ್ಯದರ್ಶಿ ಸುಧಾಕರ ಶೆಟ್ಟಿ ಮತ್ತು ಅನೇಕ ಹಿರಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಪದಾಳ ಶ್ರೀ ಸುಬ್ರಹ್ಮಣ್ಯ ದೇವಾಲಯದಲ್ಲಿ, ರಥಬೀದಿ ವಾರ್ಡ್ ಮುಂತಾದೆಡೆಗಳಲ್ಲಿ ಕೂಡಾ ಸಾಮೂಹಿಕ ಗೋಪೂಜೆ ನಡೆಯಿತು.

## ಸಾಮೂಹಿಕ ತುಳಸಿಪೂಜೆ

ಉಪ್ಪಿನಂಗಡಿ : ಶ್ರೀ ಮಾಧವ ಶಿಶುಮಂದಿರ ವೇದಶಂಕರನಗರ ನಟ್ಟಿಬೈಲ್ – ಉಪ್ಪಿನಂಗಡಿ ಇಲ್ಲಿ ಶುಕ್ರವಾರದಂದು ಸಾಮೂಹಿಕ ತುಳಸಿ ಪೂಜೆಯು ಮಾತೆಯರು ಮತ್ತು ಪುಟಾಣಿ ಮಕ್ಕಳಿಂದ ನಡೆಯಿತು. ಭಾರತ ಮಾತೆಗೆ ದೀಪಾರ್ಚನೆ ಮತ್ತು ಪುಷ್ಪಾರ್ಚನೆ ನಡೆಸಿ, ಶಿಶು ಮಂದಿರದಲ್ಲಿನ ತುಳಸಿ ಗಿಡಕ್ಕೆ ಮಕ್ಕಳ ಮಾತೆಯರಿಂದ ಸಾಮೂಹಿಕವಾಗಿ ದೀಪದಾರತಿ ಬೆಳಗಿಸಿ ತುಳಸಿ ಪೂಜೆಯನ್ನು ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಶಿಶು ಮಂದಿರದ ಪುಟಾಣಿ ಮಕ್ಕಳಿಂದ ಸಾಮೂಹಿಕ ಭಜನಾ ಕಾರ್ಯಕ್ರಮವು ನಡೆಯಿತು. ಇದೇ ಸಂದರ್ಭದಲ್ಲಿ ಮಾತೆಯರಿಂದ ಸಾಮೂಹಿಕ ಗೋ ಪೂಜೆಯನ್ನೂ ಶಿಶುಮಂದಿರದಲ್ಲಿ ನಡೆಸಲಾಯಿತು. ಶಿಶುಮಂದಿರದ ಮಾತಾಜಿ ಭಾ ರೋಹಿಣಿ ರವರ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಮಾತೃ ಮಂಡಳಿಯ ಅಧ್ಯಕ್ಷೆ ಸುಭದ್ರಾ ಭಟ್, ಸದಸ್ಯರಾದ ಯು.ರಾಧಾ, ಕುಸುಮಾ ಲಕ್ಷ್ಮಣ್, ವಾಣಿ ಕೃಷ್ಣ, ಚಂದ್ರಾವತಿ, ಮೊದಲಾದ ಮಾತೆಯರು ಭಾಗವಹಿಸಿದರು.

## ಮಾಂಗಲ್ಯ ನಿಧಿ ವಿತರಣೆ

**ಉಪ್ಪಿನಂಗಡಿ :** ಇಲ್ಲಿನ ವೇದಶಂಕರ ನಗರದಲ್ಲಿರುವ ಶ್ರೀ ಮಾಧವ ಶಿಶು ಮಂದಿರದ ಆಶ್ರಯದಲ್ಲಿ ಬಡಕುಟುಂಬದಲ್ಲಿನ ವಿವಾಹ ಕಾರ್ಯಕ್ರಮಕ್ಕೆ ಅನುಕೂಲ ಕಲ್ಪಿಸುವ ಸಲುವಾಗಿ ಮಾಂಗಲ್ಯನಿಧಿಯನ್ನು ವಿತರಿಸಲಾಯಿತು. ವಿತರಣಾ ಕಾರ್ಯವನ್ನು ನೆರವೇರಿಸಿದ ನಿವೃತ್ತ ಸೇನಾಧಿಕಾರಿ ಕೆ.ಸುರೇಶ್ ರವರು ಮಾತನಾಡಿ, ಭಗವಂತ ನೀಡಿದ ಸಂಪತ್ತಿನ ಒಂದು ಭಾಗವನ್ನು ಬಡವರಿಗೆ ಅರ್ಪಿಸುವುದೇ ನಿಜವಾದ ದೇವರ ಸೇವೆ. ಪ್ರತಿಯೊಬ್ಬರು ವಿಶಾಲ ಮನೋಭಾವದಿಂದ ಸಂಘಟಿತರಾಗಿ ಪ್ರಯತ್ನಿಸಿದರೆ ನಮ್ಮ ಸಮಾಜದ ನೋವನ್ನು ಸುಲಭವಾಗಿ ನಿವಾರಿಸಲು ಸಾಧ್ಯ. ಶಿಶು ಮಂದಿರದ ಆಶ್ರಯದಲ್ಲಿ ಬಡ ಮನೆಯೊಂದರ ಮಂಗಲ ಕಾರ್ಯವನ್ನು ನೆರವೇರಿಸಲು ಸಹಾಯ ನೀಡುವ ಮುಖೇನ ಸಮಾಜದ ಅಗತ್ಯಗಳಿಗೆ ಸ್ಪಂದನ ನೀಡುವ ಕಾರ್ಯ ನಡೆದಿರುವುದು ಶ್ಲಾಘನೀಯವೆಂದರು. ಕಾರ್ಯಕ್ರಮದಲ್ಲಿ ಶ್ರೀಮತಿ ಕೃಷ್ಣಮ್ಮ ಎಂಬುವವರ ಮಗಳ ವಿವಾಹಕ್ಕಾಗಿ ಶಿಶು ಮಂದಿರ ಸಮಿತಿಯಿಂದ ರೂ 12,000/– ವನ್ನು ಚೆಕ್ ರೂಪದಲ್ಲಿ ವಿತರಿಸಲಾಯಿತು.

## ಯೋಗಾಸನ ಶಿಬಿರ

**ಉಪ್ಪಿನಂಗಡಿ :** ಇಲ್ಲಿನ ವೇದಶಂಕರ ನಗರದಲ್ಲಿನ ಶ್ರೀ ಮಾಧವ ಶಿಶು ಮಂದಿರದಲ್ಲಿ ಹಮ್ಮಿಕೊಳ್ಳಲಾದ ಮಾತೆಯರ ಹದಿನೈದು ದಿನಗಳ ಯೋಗಾಸನ ಶಿಬಿರವು ಶನಿವಾರದಂದು ಸಮಾಪನಗೊಂಡಿತು.

ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಉದ್ಯಮಿ, ಸಮಿತಿಯ ಕಾರ್ಯದರ್ಶಿ ಯು.ಕೆ ರೋಹಿತಾಕ್ಷರವರು ಸ್ವಸ್ಥಸಮಾಜದ ನಿರ್ಮಾಣಕ್ಕೆ ಮೂಲ ಕಾರಣವಾದ ದೈಹಿಕ ಆರೋಗ್ಯವನ್ನು ಕಾಪಾಡಿಕೊಳ್ಳುವ ಸಲುವಾಗಿ ಯೋಗಾಭ್ಯಾಸ ಅತೀ ಅಗತ್ಯ. ಆದ್ದರಿಂದ ಹಾಗೂ ಮುಂದಿನ ದಿನಗಳಲ್ಲಿ ಮತ್ತಷ್ಟು ಶಿಬಿರಗಳನ್ನು ನಡೆಸಲು ಯೋಚಿಸಲಾಗಿದೆ ಎಂದರು. ರವೀಂದ್ರ ಆಚಾರ್ಯ ರವರ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಶಿಬಿರಾರ್ಥಿ ಮಾತೆಯರಿಂದ ಯೋಗಾಸನದ ಪ್ರದರ್ಶನವನ್ನು ಮಾಡಲಾಯಿತು. ಯೋಗ ಶಿಕ್ಷಕಿಯಾಗಿ ಭಗಿನಿ ರೋಹಿಣಿ ಮಾತಾಜಿ ಯವರು ಕಾರ್ಯನಿರ್ವಹಿಸಿದರು.

**ವರದಿ : ಯು.ಎಲ್. ಉದಯ್ ಕುಮಾರ್**

## ಹಬ್ಬ ಹರಿದಿನ

# ನಮ್ಮ ಹಬ್ಬಗಳ ಮಹತ್ವ

ವರ್ಷಾವಧಿ ಹಬ್ಬಗಳೆಲ್ಲ ಮುಗಿದಿವೆ. ದಸರಾ ದೀಪಾವಳಿಗಳು ಮುಗಿದು ತುಳಸಿ ಹಬ್ಬಕ್ಕೆ ಪಟಾಕಿಗಳೂ ಮುಗಿದವು. ಆದರೂ ಮನಸ್ಸಿನಿಂದ, ಹಬ್ಬದ ಸಂಭ್ರಮ, ನಾಲಿಗೆಯಿಂದ ಸಿಹಿ, ಖಾರದ, ಕರಿದ, ತಿಂಡಿಗಳ ರುಚಿ ಇನ್ನೂ ಹೋಗಿಲ್ಲ!

ಸಂಪ್ರದಾಯದಂತೆ ಹಬ್ಬಗಳನ್ನು ಆಚರಿಸುವಾಗ ಕೆಲವು ಪದ್ಧತಿಗಳು ಮತ್ತು ರೀತಿ ನೀತಿಗಳು ಈಗಿನ ಕಾಲಕ್ಕೆ ಅನುಗುಣವಾಗಿ ತಮ್ಮ ಅರ್ಥವನ್ನು ಕಳೆದುಕೊಂಡು ನೀರಸವಾಗಿಬಿಡುತ್ತವೆ. ಹಬ್ಬದ ಆಚರಣೆಗಳ ಹಿಂದಿರುವ ಸಾಮಾಜಿಕ ಮತ್ತು ಆಧ್ಯಾತ್ಮಿಕ ಅರ್ಥವನ್ನು ತಿಳಿದುಕೊಂಡರೆ ಆಗ ಹಬ್ಬದ ಆಚರಣೆಗಳು ಅರ್ಥವತ್ತಾಗಿ ಆಕರ್ಷಣೀಯವಾಗಬಹುದು.

ನಮ್ಮ ಪೂರ್ವಿಕರು ಮನುಷ್ಯನನ್ನು ಎಂದೂ ಒಬ್ಬಂಟಿಯಾಗಿ ಗುರುತಿಸಲಿಲ್ಲ. ಅವನನ್ನು ಸಮಾಜದೊಂದಿಗೆ ಅಥವಾ ಪ್ರಕೃತಿಯೊಂದಿಗೆ ಜೋಡಿಸಿದರು. ಏಕೆಂದರೆ ಮನುಷ್ಯನಿಗೆ ಪ್ರಕೃತಿಯ ಸಹಾಯವಿಲ್ಲದೆ ಅಥವಾ ಸಮಾಜದ ಸಹಾಯವಿಲ್ಲದೆ ಬಾಳಲು ಸಾಧ್ಯವಿಲ್ಲ. ಅಷ್ಟೇ ಅಲ್ಲ ಮನುಷನನ್ನು ಕೇವಲ ದೇಹಧಾರಿಯಾಗಿ ನೋಡದೇ ಆತ್ಮ ಸ್ವರೂಪಿಯಾಗಿ ಕಂಡರು. ಅವನ ಆತ್ಮೋದ್ಧಾರಕ್ಕಾಗಿ ಈ ಹಬ್ಬಗಳ ಮೂಲಕ ಅವನ ಅಂತರಂಗ ಬಹಿರಂಗ ಶುದ್ಧಿಗಳು ಆಗುವಂತೆ ಸಂಪ್ರದಾಯಗಳನ್ನು ಹುಟ್ಟುಹಾಕಿದರು. ಹುಟ್ಟಿನಿಂದ ಮನುಷ್ಯ ಸ್ವಾರ್ಥಿ ಎನ್ನುತ್ತದೆ ಮನಶ್ಶಾಸ್ತ್ರ. ಅವನನ್ನು ದೀನ ದಲಿತರಿಗೆ ದಾನಿಯಾಗಿ, ಪ್ರಕೃತಿಯ ಪೂಜಕನಾಗಿ, ಬಂಧು ಬಾಂಧವರ ಮಿತ್ರನಾಗಿ, ಸಮಾಜಕ್ಕೆ ಒಬ್ಬ ಒಳ್ಳೆಯ ಪ್ರಜೆಯಾಗಿ ಅವನನ್ನು ರೂಪಿಸುವುದೇ ಈ ಹಬ್ಬಗಳ ಮೂಲ ಉದ್ದೇಶ.

**ಮಹಾಪುರುಷರ ಆದರ್ಶ:** ಪ್ರತೀ ಹಬ್ಬಗಳ ಹಿಂದೆಯೂ ಒಬ್ಬ ದೇವರ ಮಹತ್ಕಾರ್ಯಗಳನ್ನು ನೆನಪಿಸಿಕೊಳ್ಳುವ ಕಥೆಗಳು ಇರುತ್ತವೆ. ಈ ಕಥೆಗಳು ಕೆಟ್ಟವರ ಮೇಲೆ ಒಳ್ಳೆಯವರ ವಿಜಯವನ್ನು ಸಾರುವುದರ ಮೂಲಕ ಮನುಷ್ಯನಲ್ಲಿ ಆಶಾವಾದವನ್ನು ಹುಟ್ಟಿಸುತ್ತವೆ. ನಮಗೆ ನಾಯಕತ್ವದ ಗುಣಗಳ ಪರಿಚಯ ಮಾಡಿಕೊಡುವ ಆ ಆದರ್ಶ ವ್ಯಕ್ತಿತ್ವಗಳು (ಉದಾ: ರಾಮ, ಕೃಷ್ಣ) ಮನುಷ್ಯನಿಗೆ ಮಾದರಿಯಾಗಿ ನಿಲ್ಲುತ್ತವೆ.

**ಉಪವಾಸದ ಮಹತ್ವ:** ಕೆಲವು ಹಬ್ಬಗಳು ಉಪವಾಸದ ಜೊತೆಗೆ ಆಚರಿಸಲ್ಪಡುತ್ತದೆ. (ಉದಾ: ಶಿವರಾತ್ರಿ, ಗೋಕುಲಾಷ್ಟಮಿ) ಉಪವಾಸಗಳು ನಮಗೆ ಅನ್ನದ ಮಹತ್ವವನ್ನು, ಇಂದ್ರಿಯ ನಿಗ್ರಹವನ್ನು, ಹಸಿದವರ ಕಷ್ಟವನ್ನು ಅರ್ಥೈಸಿಕೊಳ್ಳುವ ಸಂವೇದನೆಯನ್ನೂ ನಮಗೆ ಕೊಡುತ್ತವೆ.

**ದಾನ ಧರ್ಮಗಳು:** ಹಬ್ಬದ ಸಮಯದಲ್ಲಿ ಕೊಡುವ ಅರಿಶಿನ, ಕುಂಕುಮ, ಮೊರದ ಬಾಗಿನ, ಸೀರೆ, ಪಂಚೆ, ತಾಂಬೂಲಗಳು ಪರಸ್ಪರ ಸೌಹಾರ್ದವನ್ನು ಸೃಷ್ಟಿಸುತ್ತವೆ. ಪುಣ್ಯ ಸಂಪಾದನೆಯ ಹೆಸರಿನಲ್ಲಿ ಸಮಾಜದ ದೀನ ದಲಿತರಿಗೆ, ದೈವ ಭಕ್ತರಿಗೆ ದಾನಗಳನ್ನು ಕೊಡುವ ಪದ್ಧತಿಗಳ ಮೂಲಕ ಸಾತ್ವಿಕ ಸ್ವಭಾವವನ್ನು ಉತ್ತೇಜಿಸಲಾಗಿದೆ.

**ಬಾಂಧವ್ಯಗಳ ಬೆಸುಗೆ:** ನಮ್ಮ ಬಂಧು ಮಿತ್ರರೊಂದಿಗೆ ಒಟ್ಟು ಸೇರಿ, ನಮ್ಮ ಕಷ್ಟ ಸುಖಗಳನ್ನು ಅವರೊಂದಿಗೆ ಹಂಚಿಕೊಳ್ಳಲು ಒಂದು ಮಾಧ್ಯಮ ಈ ಹಬ್ಬಗಳು. ಮಾತನಾಡಲು ಸಮಯವೇ ಇಲ್ಲದೆ, ಇಬ್ಬರ ಮಧ್ಯೆ ಸಂವಹನವೇ ಇಲ್ಲದೆ ಸಂಬಂಧಗಳು ಸೊರಗುತ್ತಿರುವ ಈ ಕಾಲದಲ್ಲಿ ಹಬ್ಬಗಳ ನಿಜವಾದ ಅರ್ಥವನ್ನು ಮತ್ತೆ ಆಚರಣೆಗೆ ತರಬೇಕಾಗಿದೆ.

ಸಂಕ್ರಾಂತಿಯಂದು "ಎಳ್ಳು ಬೆಲ್ಲ ಕೊಟ್ಟು ಒಳ್ಳೆಯ ಮಾತನಾಡು" ಎಂಬ ಮುತ್ತಿನಂತಹ ಮಾತಿನಂತೆ ಆ ದಿನ ಎಲ್ಲಾ ಬಂಧು ಬಾಂಧವರಿಗೂ, ಸ್ನೇಹಿತರಿಗೂ, ನೆರೆಹೊರೆಯವರಿಗೂ, ಎಳ್ಳು ಬೆಲ್ಲ ಕೊಟ್ಟು ಸವಿ ಮಾತುಗಳನ್ನಾಡಿ ಅವರೊಂದಿಗೆ ಸ್ನೇಹ ಬಾಂಧವ್ಯವನ್ನು ಬೆಸೆಯುವ ಪ್ರಯತ್ನ ಮಾಡಿದರೆ, ಗಣೇಶನ ಹಬ್ಬವನ್ನು ಸಾಮೂಹಿಕವಾಗಿ ಆಚರಿಸಿ ನಮ್ಮ ಒಗ್ಗಟ್ಟನ್ನು ಮೆರೆಯುತ್ತೇವೆ. ದಸರಾದಲ್ಲಿ ಕೆಟ್ಟ ಶಕ್ತಿಗಳ ಮೇಲೆ ಒಳ್ಳೆಯ ಶಕ್ತಿಗಳ ವಿಜಯೋತ್ಸಾಹವನ್ನು ಆಚರಿಸಿದರೆ, ನಾಗರಪಂಚಮಿ ಅಣ್ಣ ತಂಗಿಯರ ಬಾಂಧವ್ಯ ಬೆಸೆಯುವ ಹಬ್ಬ. ಹೀಗೆ ಹಬ್ಬಗಳ ಆಚರಣೆಗಳು ಎಲ್ಲಾ ಕಾಲಕ್ಕೂ ಅನ್ವಯವಾಗುತ್ತದೆ. ●

4ನೇ ಪುಟದಿಂದ

# ಸೇವಾವ್ರತಿಗಳೇ.........

ಹೀಗೆ ಕಲ್ಪನೆಯ ಉದ್ಯಾನಕ್ಕೆ ತಕ್ಕಂತೆ ಕರ್ತೃತ್ವದ ಗುಡಾಣ, ಪ್ರತಿಭೆಯ ಪಂಜಿಗೆ ಪರಿಶ್ರಮದ ತೈಲ. ಹೊಸಹೊಸ ಕಲ್ಪನೆ – ಯೋಜನೆಗಳ ಸರಮಾಲೆ. ಅವನ್ನು ಕಾರ್ಯರೂಪಕ್ಕೆ ಇಳಿಸಬಲ್ಲಂತಹವರ ನಿತ್ಯಶೋಧನೆ, ನಿರಂತರ ಜೋಡಣೆ, ಎಂದೂ ವಿರಾಮವರಿಯದ ಮೆದುಳು – ಮೈ. ಕಾರ್ಯ ಮತ್ತು ಕಾರ್ಯಕರ್ತ ಇವೆರಡನ್ನೂ ಮೇಳೈಸುವುದರಲ್ಲಿ ಸಿದ್ಧ ಹಸ್ತ. ಸಂಘದ್ದೇ ಪ್ರೇರಣೆ, ಸಂಘಕ್ಕೇ ಸಮರ್ಪಣೆ. ತಾನೊಬ್ಬ ಮಾಧ್ಯಮ ಅಷ್ಟೇ – ಎನ್ನುವ ಸ್ವಚ್ಛ ಸಂಘದೃಷ್ಟಿ, ಇವೆಲ್ಲವೂ ಸಂಗಮಿಸಿದ ವ್ಯಕ್ತಿತ್ವವೇ ಅಜಿತಕುಮಾರ್ . ಆ ವ್ಯಕ್ತಿತ್ವದ್ದೇ ಸಾಮಾಜಿಕರೂಪ ಹಿಂದು ಸೇವಾ ಪ್ರತಿಷ್ಠಾನ".

**ಅಜಿತ ವಿಚಾರ ಸಂಪದ**

ಅಜಿತ್ ಆಲೋಚನೆಗಳು ಅಸಂಖ್ಯ. ಪ್ರತಿಯೊಂದೂ ಒಂದೊಂದು ತೆರ. ಎಲ್ಲದಕ್ಕೂ ಒಂದು ಭದ್ರ ಬುನಾದಿ. ಕಣ್ಣೆದುರಿಗೊಂದು ಹಿರಿಯ ಆದರ್ಶ. ಅವರ ಅಭಿರುಚಿಗಳು ಹಲವು. ಆಟ, ಈಜು, ಕಸರತ್ತು ಆರಂಭದಲ್ಲಿ. ಮುಂದೆ ಯೋಗ, ಪ್ರಾಣಾಯಾಮ, ಶಿಸ್ತು – ಅನುಶಾಸನ, ಸಂಘ, ಸೇವೆ, ಹೋಮಿಯೋಪತಿ, ವ್ಯಕ್ತಿತ್ವವಿಕಾಸ ಹೀಗೆ ಹಲವು ಕ್ಷೇತ್ರಗಳೂ. ಸಮಾಜದೇವನ ಅರ್ಚನೆಗೆ ನೂರೆಂಟು ಉಪಕರಣಗಳಿದ್ದವು ಅವರಲ್ಲಿ. ಪ್ರತೀ ಕ್ಷೇತ್ರವೂ ಒಂದೇ ಗುರಿ ತಲಪುವ ಬೇರೆ ಬೇರೆ ಮಾರ್ಗಗಳು ಎಂದವರ ನಂಬಿಕೆ.

ಸೇವೇ : ಏಕೆ ? ಹೇಗೆ?

'ಸೇವೆ ಕೇವಲ ಪುಣ್ಯ ಸಂಪಾದನೆಗಾಗಿ ಅಲ್ಲ. ಬದಲು ಅದು ಕರ್ತವ್ಯ. ತನ್ನನ್ನು ತಾನು ಬೆಳೆಸಿಕೊಳ್ಳಲು ಹೆದ್ದಾರಿ. ತನ್ನ ಶಕ್ತಿ – ಸಾಮರ್ಥ್ಯವನ್ನೆಲ್ಲ ಸಮಾಜಕ್ಕಾಗಿ ಸಮರ್ಪಿಸುವುದರಿಂದಲೇ ವ್ಯಕ್ತಿ ತಾನು ಬೆಳೆಯಬಲ್ಲ. ಇತರರನ್ನೂ ಬೆಳೆಸಬಲ್ಲ.

"ಸೇವೆ" ಫ್ಯಾಷನ್ ಆಗುತ್ತಿರುವ ಈ ಕಾಲದಲ್ಲಿ ಅವರ ಸೇವೆಯ ವ್ಯಾಖ್ಯೆ ಪರಿಣಾಮಕಾರಿ. 'ತಮ್ಮ ತಮ್ಮ ಕ್ಷೇತ್ರದಲ್ಲಿರುವ ಕೊರತೆಗಳನ್ನು ಆ ಕೊರತೆಯುಳ್ಳವರೇ ತುಂಬಿಕೊಳ್ಳುವಂತೆ ಮಾಡುವುದೇ ನಿಜವಾದ ಸೇವೆ. ಇನ್ನೊಂದು ಅರ್ಥದಲ್ಲಿ ಹೇಳುವುದಿದ್ದರೆ ಸಮಾಜ ಜೀವನ ಉತ್ತಮವಾಗಿರಲು ಬೇಕಾದ ಗುಣಗಳ ಶಿಕ್ಷಣವೇ ಸೇವೆ'. ಮನುಷ್ಯರನ್ನು ಉತ್ತಮ ವ್ಯಕ್ತಿಗಳನ್ನಾಗಿ ಮಾಡುವ ಕಾರ್ಯವೇ ಸೇವೆ. ಸೇವಾ ಪ್ರಕಲ್ಪಗಳಿಂದ ಭೌತಿಕ ಅವಶ್ಯಕತೆಗಳ ಪೂರೈಕೆಯಾದರೆ ಸಾಲದು; ಉತ್ತಮ ವ್ಯಕ್ತಿಗಳೂ ಸಿದ್ಧರಾಗಬೇಕು.

ಸೇವೇ ಕುರಿತು ಎಚ್ಚರಿಕೆಯ ಮಾತು – "ಸೇವೆ ಮಾಡುವವರು ಸದಾ ಮಾಡುತ್ತಲೇ ಇರುವುದು; ಮಾಡಿಸಿಕೊಳ್ಳುವವರು ಹಾಗೆಯೇ ಇರುವುದು ಸರಿಯಲ್ಲ. ಕೊರತೆ ಇರುವಲ್ಲಿಂದಲೇ ಸೆವೆ ಮಾಡುವವರೂ ಹುಟ್ಟಿ ಬಂದು ಸಮಾಜ ಸ್ವಯಂಪರಿಪೂರ್ಣವಾಗಬೇಕು".

ಮಾನವ ಬನ ಸಕತಾ ಹೈ, ಬನಾ ಸಕತಾ ಹೈ (ಮಾನವ ತಾನಾಗಬಲ್ಲ; ತಾ ಮಾಡಲೂ ಬಲ್ಲ.)' ಇದು ಅವರು ಸದಾ ಹೇಳುತ್ತಿದ್ದ ಮಾತು.

" ನಮ್ಮ ಕೆಲಸ ಚಳವಳಿಯ ಕೆಲಸ, ಚಳವಳಿಗೆ ಎಲ್ಲಕ್ಕಿಂತ ಮಿಗಿಲಾಗಿ ಒಂದು ಸುಸ್ಪಷ್ಟ ಧ್ಯೇಯವಿರಬೇಕು; ಲಕ್ಷ್ಯವಿರಬೇಕು. ಅದರ ಚಿತ್ರ ಸ್ಪಷ್ಟವಾದಷ್ಟೂ ನಮಗೆ ಹೆಚ್ಚಿನ ಪ್ರೇರಣೆ ದೊರೆಯುತ್ತದೆ" – ಎನ್ನುತ್ತಾರೆ ಅಜಿತ್.

'ಸಾಮೂಹಿಕ ಸಕ್ರಿಯತೆ' ಕಾರ್ಯಕರ್ತರ ತಂಡದಲ್ಲಿರಬೇಕಾದ ಅಗತ್ಯ ಗುಣ ಎನ್ನುವ ಅಜಿತರು ಕಾರ್ಯಕರ್ತರ ಗುಣವನ್ನು ಹೀಗೆ ಪಟ್ಟಿ ಮಾಡಿದ್ದಾರೆ – ಮಧುರವಾಣಿ, ವಿಶುದ್ಧ ಚಾರಿತ್ರ್ಯ, ಸಮೂಹದೊಂದಿಗೆ ಕೆಲಸ ಮಾಡುವ ಮನೋಭಾವ ಹಾಗೂ ಅಖಂಡ ಆತ್ಮ ವಿಶ್ವಾಸ.

'ಬದ್ಧತೆ' (ಯಾವುದಕ್ಕೇ ಕಟ್ಟುಹಾಕಿಕೊಳ್ಳುವುದು) ಸರಿಯಲ್ಲ ಎನ್ನುವ ದಿನಗಳಲ್ಲಿ ಅಜಿತರ ಮಾತೊಂದು ಮಾರ್ಮಿಕ: 'ನಮ್ಮ ಚಿಂತನ – ಜ್ಞಾನಶೀಲ ಪ್ರಧಾನವಾಗಿರಬೇಕು. ಈ ಬಗ್ಗೆ ಬದ್ಧತೆ ಮತ್ತು ನಿಷ್ಠೆ ಇವೆರಡೂ ಇರಲೇಬೇಕು'.

(ಲೇಖನ : 'ಮಿತ್ರಾಯ ನಮಃ' ಪುಸ್ತಕದ ಮುನ್ನುಡಿಯಿಂದ ಆಯ್ದಭಾಗ)

# ನೀವೂ ಓದಿ

## ಸೇವೆಯ ಸಾಕಾರಮೂರ್ತಿ

"ತ್ಯಾಗ ಮತ್ತು ಸೇವೆ – ಇವೇ ಭರತಖಂಡದ ಆದರ್ಶಗಳು" – ಎಂದಿದ್ದರು ಸ್ವಾಮಿ ವಿವೇಕಾನಂದರು. ಅವರ ಮಾತನ್ನು ಅಕ್ಷರಶಃ ಪಾಲಿಸಿ, ಸೇವೆಯನ್ನು ಜೀವನದ ಉಸಿರಾಗಿಸಿಕೊಂಡು ಬದುಕಿದವರು ಸಂತ ಕಲ್ಯಾಣಾನಂದರು. ಕನ್‌ಖಲ್‌ನಲ್ಲಿನ ಸೇವಾಶ್ರಮ ಅವರ ತಪೋಭೂಮಿಯಾಗಿತ್ತು.

ಅದೊಂದು ದಿನ ಸ್ವಾಮಿ ವಿವೇಕಾನಂದರು, ಕಲ್ಯಾಣಾನಂದರನ್ನು ಐಸ್ ತರಲು ಕಳಿಸಿದರು. ಕಲ್ಯಾಣರು, ಒಂದು ದೊಡ್ಡ ಐಸ್‌ಗಡ್ಡೆಯನ್ನೇ ತಲೆಯ ಮೇಲೆ ಹೊತ್ತು ತಂದರು. ಅವರ ತಲೆ ಮಂಜುಗಡ್ಡೆಯಿಂದಾಗಿ ಮರಗಟ್ಟಿ ಹೋಗಿತ್ತು. ಅದನ್ನು ಕಂಡ ವಿವೇಕಾನಂದರು, "ನೀನೊಂದು ದಿನ ಪರಮಹಂಸನಾಗುವೆ" ಎಂದು ನುಡಿದಿದ್ದರು.

1900ರ ಸಮಯ. ವಿವೇಕಾನಂದರು ಕಲ್ಯಾಣ್‌ರನ್ನು ಕೇಳಿದರು: "ಗುರುದಕ್ಷಿಣೆ ಏನು ಕೊಡುತ್ತೀಯಾ? ಏನಿದೆ ನಿನ್ನ ಬಳಿ?" "ನಾನಿಲ್ಲಿದ್ದೇನೆ – ನನ್ನನ್ನೇ ನಿಮಗರ್ಪಿಸಿದ್ದೇನೆ" – ಎಂದರು ಕಲ್ಯಾಣ್. ವಿವೇಕಾನಂದರು ಹೇಳಿದರು: "ಹರಿದ್ವಾರಕ್ಕೆ ಹೋಗು. ತುಂಡು ನೆಲ ಕೊಳ್ಳುವಷ್ಟು ಹಣ ಕೊಡುತ್ತೇನೆ, ಒಂದು ಕುಟೀರ ಕಟ್ಟಿಕೊ. ಅಲ್ಲೊಂದು ಕಟ್ಟಡ ನಿರ್ಮಿಸು. ಸುತ್ತ ಮುತ್ತ, ರಸ್ತೆ ಬದಿ ಯಾರಾದರೂ ಕಷ್ಟದಿಂದ ನರಳುತ್ತಿರುವರೆ ಎಂದು ಹುಡುಕು. ಅವರನ್ನು ಕರೆತಂದು ಚಿಕಿತ್ಸೆ ನೀಡು. ಬಂಗಾಳವನ್ನು ಮರೆತುಬಿಡು! ಮರಳಿ ಬರಬೇಡ, ಹೋಗು!" ಕಲ್ಯಾಣರು ವಿವೇಕಾನಂದರ ಆದೇಶವನ್ನು ಚಾಚೂ ತಪ್ಪದೆ ಪಾಲಿಸಿದರು, ಹರಿದ್ವಾರದ ಕನ್‌ಖಲ್‌ನಲ್ಲಿ ಸೇವಾಶ್ರಮವೊಂದನ್ನು ಕಟ್ಟಿದರು. ಬಂಗಾಳವನ್ನು ಮರೆತುಬಿಟ್ಟರು, ಮತ್ತೆಂದೂ ಅವರು ಬಂಗಾಳಕ್ಕೆ ಬರಲೇ ಇಲ್ಲ!

ಒಂದುದಿನ ಕನ್‌ಖಲ್‌ನ ಸೇವಾಶ್ರಮದ ಸುತ್ತ ಬೆಳೆದಿದ್ದ ನೂರಾರು ಮಾವಿನ ಮರಗಳಲ್ಲಿ ತೂಗುತ್ತಿದ್ದ ಹಣ್ಣುಗಳನ್ನು ನೋಡಿ ಸಾಧುವೊಬ್ಬರು, 'ಹಣ್ಣು ಮಾರಿದರೆ ಸಾವಿರಾರು ರೂಪಾಯಿ ಬರುತ್ತದೆ' ಎಂದರು. ಆದರೆ ಕಲ್ಯಾಣಾನಂದರು ಅದಕ್ಕೆ ಒಪ್ಪಲಿಲ್ಲ. "ನೀವು ತಿನ್ನಿ, ಭಿಕ್ಷೆಗೆ ಬರುವ ಸಾಧುಗಳಿಗೆ ನೀಡಿ, ಬಡವರಿಗೆ ಹಂಚಿ" ಎಂದರು. ಅವರ ಇಡೀ ಜೀವನಕಾರ್ಯ ಜನರಿಗಾಗಿ, ಬಡವರ ಒಳಿತಿಗಾಗಿತ್ತೇ ಹೊರತು ಹಣ ಮಾಡುವುದಕ್ಕಾಗಿರಲಿಲ್ಲ.

ಕೆಲಸದ ಪ್ರಮಾಣಕ್ಕಿಂತ ಅದರ ಗುಣಮಟ್ಟ ಮುಖ್ಯ. ಕೇವಲ ಒಬ್ಬ ರೋಗಿಗೆ ಸಹಾಯ ಮಾಡಿದರೂ ಸಾಕಷ್ಟಾಯಿತು. ಸೇವೆ ಅತ್ಯಂತ ಮುಖ್ಯವಾದ ಸಂಗತಿ. ಕಣ್ಣಮುಂದಿನ ಕೆಲಸ ಎಷ್ಟೇ ಚಿಕ್ಕದಾಗಿರಲಿ, ಅದನ್ನು ಮಾಡು. ಇಲ್ಲದಿದ್ದರೆ ಮನಸ್ಸು ಬರೀ ಯೋಜನೆ ಹಾಕಿಕೊಳ್ಳುವುದರಲ್ಲೇ ತೊಡಗುತ್ತದೆ, ಇಡೀ ಜೀವನವೇ ಅದರಲ್ಲಿ ವ್ಯರ್ಥವಾಗುತ್ತದೆ – ಎನ್ನುತ್ತಿದ್ದರು, ಅದೇ ರೀತಿ ಜೀವನಪೂರ್ತಿ ಕೆಲಸ ಮಾಡಿದರು.

ಇಂತಹ ತಪಸ್ವಿಯೊಬ್ಬರ ಜೊತೆಗಿನ ಅನುಭವವನ್ನು, ರೋಗಪೀಡಿತರ ಸೇವೆಯಲ್ಲೇ ಅವರು ಭಗವಂತನನ್ನು ಕಂಡ ಪರಿಯನ್ನು ಮನಮುಟ್ಟುವಂತೆ ಪರಿಚಯಿಸುವ ಪುಸ್ತಕ 'ಸೇವೆಯ ಸಾಕಾರಮೂರ್ತಿ' ಸ್ವಾಮಿ ಅಖಂಡಾನಂದರ ಸೂಚನೆಯಂತೆ ಕನ್‌ಖಲ್‌ಗೆ ತೆರಳಿ, ಕಲ್ಯಾಣಾನಂದರ ಜೊತೆಗಿದ್ದ ಸ್ವಾಮಿ ಸರ್ವಗತಾನಂದರು ಬರೆದಿರುವ ಈ ಪುಸ್ತಕವನ್ನು ಬ್ರ. ಅದ್ವೈತ ಚೈತನ್ಯರು ಕನ್ನಡಕ್ಕೆ ತಂದಿದ್ದಾರೆ. ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮ ಪ್ರಕಟಿಸಿರುವ ಈ ಚಿಕ್ಕ ಚೊಕ್ಕ ಪುಸ್ತಕ, ಸೇವೆಯ ಕುರಿತು ನಮ್ಮನ್ನು ಚಿಂತನೆಗೆ ಹಚ್ಚುತ್ತದೆ. ಸೇವಾಕ್ಷೇತ್ರದಲ್ಲಿ ಕೆಲಸ ಮಾಡುವ ವ್ಯಕ್ತಿ ಹೊಂದಿರಬೇಕಾದ ಮಾನಸಿಕತೆಯ ಪರಿಚಯವನ್ನೂ ಮಾಡಿಕೊಡುತ್ತದೆ.

●

**ಸಹಕಾರ ಭಾರತಿ ಸಂಘಟನೆಯ ಜೊತೆ ದೇಶಾದ್ಯಂತ 3.5 ಲಕ್ಷ ಸ್ವಸಹಾಯ ಸಂಘಗಳು ಕೆಲಸ ಮಾಡುತ್ತಿವೆ.**

## ಶಿಬಿರಾರ್ಥಿಗಳ ಸ್ಫೂರ್ತಿಯ ಅನಿಸಿಕೆಗಳು

ಈ ಶಿಬಿರದಿಂದಾಗಿ ನನ್ನ ಚಂಚಲ ಮನಸ್ಸು ದೃಢವಾಗಿದೆ. ಇಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ಸಿಗುತ್ತಿದೆ.

– ಸಂಧ್ಯಾ, ಕೊಕ್ಕಡ (ದಕ್ಷಿಣ ಕನ್ನಡ)

ಕಾರ್ಯಕ್ಷೇತ್ರ ಯಾವುದೇ ಆಗಲಿ, ಏನೇ ಕಷ್ಟ ಬರಲಿ ಅದನ್ನು ಎದುರಿಸಿ ಮಕ್ಕಳಿಗೆ ಮಾತಾಜಿಯಾಗಿ, ತಾಯಂದಿರಿಗೆ ಮಗಳಾಗಿ, ಅಣ್ಣಂದಿರಿಗೆ ತಂಗಿಯಾಗಿ ಸಮಾಜ ಸೇವೆಯನ್ನು ಸೇವಾವ್ರತಿಯಾಗಿ ಮಾಡುತ್ತೇನೆ.

– ಪಿ.ಎಸ್. ಅನಂತಿ, ಪೆರಾಜೆ (ಕೊಡಗು)

ನನ್ನ ಜೀವನದಲ್ಲಿ ಸಂಕಲ್ಪ ಮಾಡಿರುವುದು ಇದೇ ಮೊದಲು. ಸೇವಾವ್ರತಿಯಾಗಿ ನಾನು ಸಮಾಜ ಸೇವೆ ಮಾಡಲು ಸಿದ್ಧಳಾಗಿದ್ದೇನೆ.

– ಸೀಮಾಶ್ರೀ, ಶಿವಪ್ಪಾಪುರ (ಭದ್ರಾವತಿ)

ಯಾರ ಜೊತೆ ಹೇಗೆ ನಡೆದುಕೊಳ್ಳಬೇಕು. ನಾಲ್ಕು ಜನರ ಮಧ್ಯೆ ಹೇಗೆ ಮಾತನಾಡಬೇಕು ಎಂಬುದನ್ನು ಕಲಿತೆ.

– ಶೀಲಾ, ಬೆಟ್ಟದಹಳ್ಳಿ (ತರೀಕೆರೆ)

'ನಾವೆಲ್ಲ ಬಾವಿಯೊಳಗಿನ ಕಪ್ಪೆಯಾಗಿದ್ವಿ, ಪ್ರತಿಷ್ಠಾನ ಅದಕ್ಕಿಂತ ದೊಡ್ಡದಾದ ಸಮುದ್ರವಿದೆ' ಎಂದು ತೋರಿಸಿಕೊಟ್ಟಿದೆ.

– ಜ್ಯೋತಿ .ಎಸ್, ಶಿಕಾರಿಪುರ

ಸಾಯಲು ಹೊರಟಿದ್ದ ನನಗೆ ಮರುಜನ್ಮವನ್ನು ಕೊಟ್ಟಿತು ಈ ಶಿಬಿರ. ಅಹಂಕಾರ ಅಡಗಿಸಿ ಓಂಕಾರನಾದ ಮೂಡಿಸಿತು. ಸ್ವಾರ್ಥ ಓಡಿಸಿ ನಿಸ್ವಾರ್ಥ ಭಾವ ಬೆಳೆಸಿ, ಸೇವೆಯ ಸವಿಯನ್ನುಣ್ಣಲು ಅವಕಾಶ ಕೊಟ್ಟಿದೆ. ಯಾರೂ ಇಲ್ಲದ ನನಗೆ ಬಳಗವನ್ನು ನೀಡಿದೆ. ಜೀವನದಲ್ಲಿ ಜ್ಯೋತಿಯನ್ನು ಬೆಳಗಿಸಿ ನನ್ನ ಮನದಲ್ಲಿ ನೆಲೆಸಿದೆ ಹಿಂದು ಸೇವಾ ಪ್ರತಿಷ್ಠಾನ.

– ಸುನಿತಾ ಪಾಟೀಲ್, ಹುಬ್ಬಳ್ಳಿ

ನನ್ನ ಜೀವನದಲ್ಲಿ ಸೇವಾ ಕಾರ್ಯಕ್ಕೆ ಸೇರಿ ಅನನ್ಯ ಅನುಭವ ಪಡೆದುಕೊಳ್ಳುತ್ತೇನೆಂದು ಅಂದುಕೊಂಡಿರಲಿಲ್ಲ. ಮನೆಯಲ್ಲಿಯೇ ಇದ್ದಿದ್ದರೆ, ಖಂಡಿತ ಇಷ್ಟೊಂದು ವಿಷಯಗಳು ತಿಳಿಯುತ್ತಿರಲಿಲ್ಲ, ಇಂತಹ ಅನುಭವ ಸಿಗುತ್ತಿರಲಿಲ್ಲ.

– ವಿಶಾಲಾಕ್ಷಿ, ವೈ

ನಾನು ಮನೆಯಲ್ಲಿ ಒಂದು ಕೆಲಸವನ್ನೂ ಮಾಡಿದವಳಲ್ಲ. ಈಗ ಎಲ್ಲಾ ಕೆಲಸಗಳ ಅನುಭವವಾಗಿದೆ. ನನ್ನಲ್ಲಿ ಇಷ್ಟೆಲ್ಲ ಸಾಮರ್ಥ್ಯ, ಧೈರ್ಯ ಇದೆ ಅಂತ ನನಗೆ ಗೊತ್ತಿರಲಿಲ್ಲ. ಆದರೆ ಈಗ ಏನನ್ನು ಬೇಕಾದರೂ ಸಾಧಿಸುವ ಧೈರ್ಯ ಬಂದಿದೆ.

– ಹರ್ಷಿತಾ. ಕೆ, ದಕ್ಷಿಣ ಕನ್ನಡ

ಗೊತ್ತಿಲ್ಲದ ಎಷ್ಟೋ ವಿಷಯ ತಿಳಿದುಕೊಂಡೆವು. ಉದಾಹರಣೆಗೆ ಅಂಬೇಡ್ಕರ್, ನಿವೇದಿತಾ ಮುಂತಾದವರ ಬಗ್ಗೆ ನಮಗೆ ಏನೂ ತಿಳಿದಿರಲಿಲ್ಲ. ಈಗ ಗೊತ್ತಾಗಿದೆ. ಅವರ ಜೀವನ ಸಾಧನೆಗಳು ನನಗೆ ಸ್ಫೂರ್ತಿ ಮತ್ತು ಧೈರ್ಯವನ್ನು ನೀಡಿದೆ.

– ಮಮತಾ, ಬೀದರ್

ನನಗೆ ಗೊತ್ತಿರುವ ವಿಷಯಗಳಿಗಿಂತ ನಾನು ತಿಳಿದುಕೊಳ್ಳಬೇಕಾದ ವಿಷಯಗಳೇ ಹೆಚ್ಚಿವೆ ಎನ್ನುವುದರ ಅರಿವಾಯಿತು. ಶಿಬಿರದಿಂದಾಗಿ ನನಗೆ ಓದುವ ಹವ್ಯಾಸ, ಕಲಿಯುವುದರಲ್ಲಿ ಆಸಕ್ತಿ ಹೆಚ್ಚಾಗಿದೆ.

– ಶಿಲ್ಪ. ಜಿ.

RNI No. KAR KAN /2005/22027 Postal Registration No.KA/RNP/BGS/2041/2008-2010



## ಹೆಜ್ಜೆಗುರುತು

## ಶಿಸ್ತು ಮಾತ್ರ ಸಾಲದು ಪ್ರೀತಿಯೂಬೇಕು

ಹಳ್ಳಿಯೊಂದರಲ್ಲಿ ಅಜ್ಜಿಯೊಂದಿಗೆ ಖುಷಿಯಿಂದ ಬೆಳೆಯುತ್ತಿದ್ದ 8 ವರ್ಷದ ಹುಡುಗ ತಾಯಿ ತಂದೆಯರ ಜೊತೆಯಲ್ಲಿ ಇರಲು ಬೆಂಗಳೂರಿಗೆ ಬಂದ. ಹುಡುಗ ಬಲು ಚೂಟಿ, ಹಾಗಾಗಿ ಒಳ್ಳೆಯ ಶಾಲೆಗೆ ಸೇರಿಸಿದರು. ಈ ಹುಡುಗನಿಗೆ ಎಲ್ಲವೂ ಹೊಸದು. ಮನೆಯ ವಾತಾವರಣವೂ ಅಷ್ಟೇ. ಚೆನ್ನಾಗಿಯೇ ಇದ್ದ ಹುಡುಗನಿಗೆ ಇದ್ದಕ್ಕಿದ್ದ ಹಾಗೆ ತೊದಲು ಮಾತು ಶುರುವಾಯಿತು. ಚಿಕಿತ್ಸೆಗಾಗಿ ಹಲವು ಆಸ್ಪತ್ರೆಗಳ ಭೇಟಿ ಫಲ ಕಾಣಲಿಲ್ಲ. ಅಂಗವಿಕಲತೆ ಎಂದು ಶಾಲೆಯಿಂದ ಹೊರ ಹಾಕಿದರು. ತಾಯಿ ತಂದೆಗಳಿಗೆ ಚಿಂತೆ ಹೀಗೆಕಾಯಿತೆಂದು. ಎಲ್ಲಿ ತೋರಿಸಿದರೂ ಗುಣ ಕಾಣಲಿಲ್ಲ. ಕಡೆಗೆ ಮಕ್ಕಳ ಮಾರ್ಗದರ್ಶಿ ಕೇಂದ್ರಕ್ಕೆ ಭೇಟಿ ನೀಡಿದರು. 2 ಗಂಟೆ ಕಾಲ ಹುಡುಗನೊಂದಿಗೆ ಆಟ, ಚಿತ್ರಕಲೆ, ಮಾತುಕತೆ ಆಡುತ್ತಿದ್ದಾಗಲೇ ತೊದಲುವಿಕೆಗೆ ಕಾರಣ ತಿಳಿಯಿತು. ತಂದೆಯ ಬಿಗಿಯಾದ ಶಿಸ್ತು, ತಾಯಿಯ ಕಠೋರತೆಯಿಂದ ತೊದಲು ಪ್ರಾರಂಭವಾಗಿದ್ದು ಆಪ್ತ ಸಲಹೆಗಾರರು ಆದ ತಪ್ಪನ್ನು ಪಾಲಕರ ಗಮನಕ್ಕೆ ತಂದರು. ವ್ಯವಹರಿಸುವುದು ಹೇಗೆಂದು ತಿಳಿಸಿದರು. 15 ದಿನಗಳಲ್ಲಿ ಹುಡುಗ ಸಹಜವಾಗಿ ಮಾತನಾಡಲು ಪ್ರಾರಂಭಿಸಿದ.

## ಸಂಸ್ಕಾರ ಶಿಬಿರ

ಸೆಪ್ಟೆಂಬರ್ ತಿಂಗಳ 23, 24 ಮತ್ತು 25ರಂದು ಕಡಬದ ಭಾರತಿ ಶಿಶುಮಂದಿರದಲ್ಲಿ ಮಕ್ಕಳ ಸಂಸ್ಕಾರ ಶಿಬಿರ ನಡೆಯಿತು. ಸುಮಾರು 75 ಮಕ್ಕಳು ಭಾಗವಹಿಸಿದ್ದ ಈ ಶಿಬಿರವು ಹಿಂದು ಸಂಸ್ಕೃತಿ, ದೇಶಪ್ರೇಮ, ಮನೆಮದ್ದು, ಶ್ಲೋಕಗಳು, ಕಸದಿಂದ ರಸ, ದೇಶಭಕ್ತಿ ಗೀತೆ, ಅಭಿನಯ ಗೀತೆ, ಭಜನೆ ಕುಣಿತ, ಮಹಾಪುರುಷರ ಕಥೆ ಮುಂತಾದ ವಿಷಯಗಳನ್ನು ಒಳಗೊಂಡಿತ್ತು.

ದಿನಾಂಕ 26 ರಂದು ಶಾರದಾ ಪೂಜೆಯ ಅನಂತರ ಸಮಾರೋಪ ನಡೆಯಿತು. ಅಂದು 9 ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸಲಾಯಿತು.

**ವರದಿ : ಸುಚಿತ್ರಾ, ಎಂ.ಎ. ಕಡಬ**

## ನವದಂಪತಿಗಳ ಸಮಾವೇಶ

ಅಕ್ಟೋಬರ್ 4ರ ಭಾನುವಾರದಂದು ಕಲ್ಲಡ್ಕದಲ್ಲಿ ನವದಂಪತಿಗಳ ಸಮಾವೇಶ ಆಯೋಜಿಸಲಾಗಿತ್ತು. 53 ದಂಪತಿಗಳು ಭಾಗವಹಿಸಿದ್ದ ಈ ಕಾರ್ಯಕ್ರಮದಲ್ಲಿ ರಾ. ಸ್ವ. ಸಂಘದ ಪ್ರಚಾರಕರಾದ ಶ್ರೀ ಸು. ರಾಮಣ್ಣರವರು ಮಾತನಾಡಿ ಕುಟುಂಬಗಳು ಸಮಾಜದ ಆಧಾರಸ್ತಂಭಗಳು, ಗೃಹಗಳ ನಿರ್ಮಾಣವೆಂದರೆ ಹೃದಯಗಳ ಮಿಲನ–ಬಂಧನ ಎಂದು ಹೇಳಿ ಸಂಸಾರದಲ್ಲಿ ತ್ಯಾಗ ಮತ್ತು ಸರಳಜೀವನದ ಮಹತ್ವವನ್ನು ವಿವರಿಸಿದರು. ನವ ದಂಪತಿಗಳಿಗೆ ಶುಭಹಾರೈಸಿದರು. ಡಾ॥ ಕಲ್ಲಡ್ಕ ಪ್ರಭಾಕರ ಭಟ್, ಶ್ರೀ ಮನೋಹರ ತುಳಜಾರಾಮ ಮತ್ತು ಶ್ರೀಮತಿ ಶ್ಯಾಮಲಾ ಮನೋಹರರವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಹೇಳಿ ಉತ್ತರ?!

**ಈ ಬಾರಿಯ ಪ್ರಶ್ನೆಗಳು:**

1. ಇಂದ್ರಜಿತುವಿನ ನಿಜವಾದ ಹೆಸರೇನು?
2. ರಾಮನ ವನವಾಸದ ಅವಧಿ ಎಷ್ಟು ವರ್ಷ?
3. ಇಂದ್ರಜಿತುವಿನೊಡನೆ ನಡೆದ ಯುದ್ಧದಲ್ಲಿ ಲಕ್ಷ್ಮಣ ಮೂರ್ಛೆ ಹೋದಾಗ ಅವನಿಗೆ ಚಿಕಿತ್ಸೆ ನೀಡಿದ ವೈದ್ಯ ಯಾರು?
4. ಸಮುದ್ರೋಲ್ಲಂಘನ ಮಾಡಲು ಹನುಮಂತನ ಶಕ್ತಿಯ ಬಗ್ಗೆ ಅವನಿಗೆ ನೆನಪಿಸಿದವರು ಯಾರು?
5. ಹನುಮಂತನ ತಾಯಿ ಯಾರು?

**ಕಳೆದ ಬಾರಿಯ ಪ್ರಶ್ನೆಗಳಿಗೆ ಸರಿಯುತ್ತರಗಳು ಹೀಗಿವೆ:**

1. ಮಿಥಿಲಾ 2. ಕೋಸಲ 3. ಚಿತ್ರಕೂಟ
4. ಲಕ್ಷ್ಮಣ ಮತ್ತು ಶತ್ರುಘ್ನ 5. ಪುತ್ರಕಾಮೇಷ್ಟಿ

**ಕಳೆದ ಬಾರಿಯ ಪ್ರಶ್ನೆಗಳಿಗೆ ಸರಿಯುತ್ತರ ಬರೆದವರು:**

- ಶಿರಾದ ಪಿ. ಎಂ. ಭ್ರಮರಾಂಬ
- ಬೆಂಗಳೂರಿನ ಮಂಜುನಾಥ ಕಲಮಗಿ
- ಬೆಂಗಳೂರಿನ ಕೆ. ಎಲ್. ವಿಜಯಮೂರ್ತಿ
- ಶಿರಸಿಯ ಸಂಧ್ಯಾ ಸುರೇಂದ್ರ ಪೈ
- ಶಿರಸಿಯ ಪದ್ಮಾ ಎಂ. ಡಿ.

ಕಳೆದ ಮೂರು ಸಂಚಿಕೆಯ ಪ್ರಶ್ನೆಗಳಲ್ಲಿ ಎರಡು ಬಾರಿಯ ಪ್ರಶ್ನೆಗಳಿಗೆ ಸರಿಯುತ್ತರ ಬರೆದವರು ಶಿರಸಿಯ ಸಂಧ್ಯಾ ಸುರೇಂದ್ರ ಪೈ ಮತ್ತು ಶಿರಾದ ಪಿ. ಎಂ. ಭ್ರಮರಾಂಬ ಅವರು. ಈ ಇಬ್ಬರೂ ವಿಜೇತರಿಗೆ ಅಂಚೆ ಮೂಲಕ ಬಹುಮಾನ ಕಳುಹಿಸಲಾಗುವುದು.

**ಗಮನಿಸಿ:**

ಈ ಸಂಚಿಕೆಯಿಂದ ಸ್ಪರ್ಧೆಯಲ್ಲಿ ಸ್ವಲ್ಪ ಬದಲಾವಣೆ. ಒಂದು ಸಂಚಿಕೆಯ ಎಲ್ಲಾ ಪ್ರಶ್ನೆಗಳಿಗೂ ನಿಮಗೆ ಉತ್ತರ ಗೊತ್ತಿರಬೇಕೆಂದೇನೂ ಇಲ್ಲ. ಎಷ್ಟು ಪ್ರಶ್ನೆಗಳಿಗೆ ಉತ್ತರ ಗೊತ್ತಿದೆಯೋ ಅಷ್ಟಕ್ಕೆ ಉತ್ತರ ಬರೆದರಾಯಿತು. ಮೂರೂ ಸಂಚಿಕೆಯ ಒಟ್ಟು 15 ಪ್ರಶ್ನೆಗಳಲ್ಲಿ ಅತೀ ಹೆಚ್ಚಿನ ಪ್ರಶ್ನೆಗಳಿಗೆ ಸರಿಯುತ್ತರ ಬರೆದವರಿಗೆ ಬಹುಮಾನ ನೀಡಲಾಗುವುದು.



ಕೋಟೇಶ್ವರದ ಶಾಂತಿಧಾಮ ಗುರುಕುಲದ ನೂತನ ಕಟ್ಟಡಕ್ಕೆ ಶಿಲಾನ್ಯಾಸ ಮಾಡುತ್ತಿರುವ ಬಾಳೇಕುದ್ರು ಮಠಾಧೀಶರಾದ ಶ್ರೀ ನೃಸಿಂಹಾಶ್ರಮ ಸ್ವಾಮೀಜಿಯವರು.

**Postal Registration No. KA/RNP/BGS/2041/2008-2010**
**RNI No. KAR KAN /2005/22027**
Office of Posting : Basavanagudi H.P.O.,BG-4. 15th of every month
**SEWA DISHA**
**ಸೇವಾ ದಿಶಾ**
ನವೆಂಬರ್ – 2009

ಇವರಿಗೆ,

Printed, Published, Owned by **K S Nagabhushan** and Printed at **Rashtrotthana Mudranalaya**, K. G. Nagar, Bangalore - 560 019 and Published at **Ajithasri**, 8/28, Basavanagudi Road, Bangalore - 560 004. Editor : **Radhakrishna Holla S L** **Website : www.hinduseva.org**